بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّیْ عَلٰی رَسُوْلِهِ الْكَرِيْمِ    وَعَلٰی عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
# WEEKLY BADAR QADIAN KANNADA

ವರ್ಷ: 01

ಸಂಚಿಕೆ: 39

ವಾರ್ಷಿಕ ಶುಲ್ಕ ರೂ.500/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

08 ಅಕ್ಟೋಬರ್ 2020, 08 ಅಖಾ 1399 ಹಿಜರಿ ಶಮ್‌ಸಿ,
20 ಸಫರ್ 1442 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِیْ عُمُرِهٖ وَاَمْرِهٖ۔

## ಅಲ್ಲಾಹನ ಉಪದೇಶ

يٰٓاَيُّهَا الَّذِيْنَ اٰمَنُوْا
خُذُوْا حِذْرَكُمْ
فَانْفِرُوْا ثُبَاتٍ
اَوِ انْفِرُوْا جَمِيْعًا○

*(ಅನ್ನಿಸಾಅ್:72)*

ಅಂದರೆ: ಎಲೈ ವಿಶ್ವಾಸಿಗಳೇ, (ನಿಮ್ಮ ರಕ್ಷಣೆಗೋಸ್ಕರ ಸದಾ) ಮುಂಜಾಗ್ರತೆ ವಹಿಸಿಕೊಳ್ಳಿರಿ. ಮತ್ತೆ (ಸಂದರ್ಭ ಬಂದ ಹಾಗೆ) ಬೇರೆ ಬೇರೆ ಗುಂಪುಗಳಾಗಿ ಅಥವಾ ಎಲ್ಲರೂ ಒಟ್ಟಿಗೆ (ಶತ್ರುಗಳ ವಿರುದ್ಧ ಸಮರಕ್ಕೆ) ಹೊರಡಿರಿ.

## ನೀತಿವಂತಿಕೆಯಲ್ಲಿ ಸಭ್ಯತೆ ಇರಲಿ, ಮಾನವೀಯ ಗುಣಗಳನ್ನು ಶಿಸ್ತುಬದ್ಧವನ್ನಾಗಿ ಮಾಡಿರಿ, ಕ್ರೋಧವಿರಬಾರದು ಅದರ ಬದಲು ನಯ ವಿನಯವನ್ನು ರೂಢಿಸಿಕೊಳ್ಳಿ. ದುಆ ಪಶ್ಚಾತ್ತಾಪ ಕಾರ್ಯಕೈಗೊಳ್ಳಿ, ದಾನ ಮಾಡುತ್ತಿರಿ ಆಗ ಅಲ್ಲಾಹನು ನಿಮ್ಮ ಮೇಲೆ ಅನುಗ್ರಹ ಔದರ್ಯ ತೋರುವನು.

### ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು

ನನ್ನ ದೃಷ್ಠಿಯಲ್ಲಿ ಸರಕಾರದ ಕಾನೂನುಗಳನ್ನು ವಿರೋಧಿಸುವುದು ದ್ರೋಹವಾಗಿದೆ. ಅದು ಒಂದು ಅಪಾಯಕರವಾದ ಅಪಾರಾಧವಾಗಿದೆ. ಹೌದು ನಿಸ್ಸಂದೇಹವಾಗಿ ಸರಕಾರದ ಕರ್ತವ್ಯವಾಗಿದೆ– ಸಜ್ಜನ ಪ್ರಮಾಣಿಕ ಮತ್ತು ದೇಶದ ರೀತಿ ರಿವಾಜುಗಳು ಹಾಗೂ ಧಾರ್ಮಿಕ ಇತಿಮಿತಿಗಳನ್ನು ಅರಿತಿರುವಂತಹ ಅಧಿಕಾರಿಗಳನ್ನು ನೇಮಿಸಬೇಕು. ಅಂತೂ ಸ್ವಯಂ ನೀವು ಕಾನೂನುಗಳನ್ನು ಪಾಲಿಸಬೇಕು ಮತ್ತು ತಮ್ಮ ಮಿತ್ರರಿಗೆ ನೆರೆಹೊರೆಯವರಿಗೆ ಆ ಕಾನುನುಗಳ ಉಪಯೋಗಗಳನ್ನು ತಿಳಿಸಬೇಕು. ನಾನು ಪದೇ ಪದೇ ಹೇಳುತ್ತಿದ್ದೇನೆ ಇದು ಪ್ರಾರ್ಥನೆ (ದುಆ) ಕೈಗೊಳ್ಳುವ ಸಮಯವಾಗಿದೆ. ಪ್ಲೇಗ್ ಸಾಂಕ್ರಮಿಕ ರೋಗವು ಪಂಜಾಬಿನತ್ತ ಮುಖ ಮಾಡಿದಂತೆ ಗೋಚರವಾಗುತ್ತದೆ ಆದುದರಿಂದ ಪ್ರತಿಯೊಬ್ಬರು ಜಾಗೃತಗೊಂಡು ಎಚ್ಚರ ವಹಿಸಿ ದುಆ ಹಾಗೂ ಪಶ್ಚಾತ್ತಾಪ ಪಡಬೇಕಾಗಿದೆ. ಪವಿತ್ರ ಖುರ್‌ಆನಿನಿಂದ ತಿಳಿದು ಬರುವುದೇನೆಂದರೆ– ಶಿಕ್ಷೆ ಎದುರಾದಾಗ ಮತ್ತೆ ಶಿಕ್ಷೆಯಿಂದ ತಪ್ಪಿಸಿಕೊಳ್ಳಲಾಗಿದೆ.

ಆದುದರಿಂದ ಶಿಕ್ಷೆ ಬರುವ ಮುಂಚಿತವಾಗಿ ಪಶ್ಚತ್ತಾಪದ ದ್ವಾರ ಮುಚ್ಚಲ್ಪಡುವ ಮೊದಲೆ ಪಶ್ಚಾತ್ತಾಪ ಪಡಬೇಕು. ಲೌಕಿಕ ಕಾನೂನುಗಳಿಂದ ಅಷ್ಟೊಂದು ಹೆದರಿಕೆ ಉಂಟಾಗ ಬಹುದಾದರೆ ಅಲ್ಲಾಹನ ಕಾನೂನುಗಳಿಗೆ ಹೆದರುವುದು ಬೇಡವೇ. ಆ ಆಪತ್ತು ನೆಲೆಯ ಮೇಲೆ ಬಂದು ಬಿಟ್ಟಾಗ ಅದರ ಶಿಕ್ಷೆ ಅನುಭವಿಸಲೇ ಬೇಕಾಗುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ತಹಜ್ಜುದ್ ನಮಾಝ್ ಮೊದಲು ಏಳುವ ಪ್ರಯತ್ನ ಮಾಡಬೇಕು ಮತ್ತು ಐದು ಹೊತ್ತು ನಮಾಝುಗಳಲ್ಲಿ ಖುನೂತ್ (ದುಆ) ಸೇರಿಸಿಕೊಳ್ಳ ಬೇಕು ಅಲ್ಲಾಹನನ್ನು ಅಸಂತುಷ್ಟ ಗೊಳಿಸುವಂತಹ ಕಾರ್ಯಗಳಿಂದ ಪಶ್ಚಾತ್ತಾಪ ಪಡಬೇಕು. ಪಶ್ಚಾತ್ತಾಪ ಎಂದರೆ ಎಲ್ಲ ದುಷ್ಕರ್ಮಗಳನ್ನು ಮತ್ತು ಅಲ್ಲಾಹನನ್ನು ಅಸಂತುಷ್ಟರಾಗಿ ಮಾಡುವಂತಹ ಕಾರ್ಯಗಳನ್ನು ತ್ಯಜಿಸಿ ನಿಜವಾದ ಪರಿವರ್ತನೆ ಉಂಟು ಮಾಡಿಕೊಳ್ಳಬೇಕು ಮತ್ತು ಭಯಭಕ್ತಿಯಿಂದ ಮುಂದೆ ಹೆಜ್ಜೆ ಹಾಕಬೇಕು. ನೀತಿವಂತಿಕೆಯಲ್ಲಿ ಸಭ್ಯತೆ ಬೆಳೆಸಿಕೊಳ್ಳಿ. ಅದು ಅಲ್ಲಾಹನ ಅನುಗ್ರಹಕ್ಕೆ ಕಾರಣವಾಗಿರುತ್ತದೆ. ಮಾನವೀಯ ಗುಣಗಳನ್ನು ಎತ್ತಿ ಹಿಡಿಯಬೇಕು. ಕ್ರೋಧವಿರಬಾರದು ಅದರ ಬದಲು ನಯವಿನಯ ತೋರಿಸಬೇಕು. ನೈತಿಕ ಸುಧಾರಣೆಯ ಜೊತೆಯಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ದಾನ ಮಾಡುತ್ತಿರಬೇಕು. **“ಯುತ್‌ಯಿಮುಸತ್ತಾಮ ಅಲಾ ಹುಬ್ಬಿಹೀ ಮಿಸ್ಕೀನೌಂ ವ ಯುತೀಮೌಂ ವ ಅಸೀರಾ”** (ಅದ್ದುಹರ್: 9) ಅಂದರೆ ಅಲ್ಲಾಹನ ಸಂಪ್ರೀತಿಗೊಸ್ಕರ ಅವರು ಅನಾಥರಿಗೂ ಕೈದಿಗಳಿಗೂ ಅನ್ನದಾನ ಮಾಡುತ್ತಾರೆ ಮತ್ತು ಪ್ರಭುವಿನಿಂದ ಬರುವ ಅಸಹನೀಯ ಹಾಗೂ ಭೀಕರವಾದ ದಿನದ ಬಗ್ಗೆ ಭಯಪಡುತ್ತಾರೆ. ಸಂಕ್ಷಿಪ್ತವಾಗಿ ಹೇಳುವುದೇನೆಂದರೆ ದುಆ ಪಶ್ಚಾತ್ತಾಪದಿಂದ ಕಾರ್ಯ ಕೈಗೊಳ್ಳಬೇಕು ದಾನ ಮಾಡುತ್ತಿರಬೇಕು ಅದರ ಫಲವಾಗಿ ಅಲ್ಲಾಹನು ನಿಮ್ಮೊಡನೆ ಅನುಗ್ರಹದಿಂದ ಔದಾರ್ಯದಿಂದ ವರ್ತಿಸುವನು.

**(ಮಲ್‌ಫೂಝಾತ್. ಸಂಪುಟ–1, ಪುಟ–192, ಮುದ್ರಣ ಖಾದಿಯಾನ್ 2018)**

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

### ರಸೂಲುಲ್ಲಾಹ್(ಸ) ರವರ ನಮಾಝ್ ಹಝ್‌ರತ್ ರಸೂಲುಲ್ಲಾಹ್(ಸ) ಝುಹರ್, ಅಸರ್ ನಮಾಝ್ ಖಿರಾತ್‌ನಿಂದ ಒಮ್ಮೊಮ್ಮೆ ಯಾವುದಾದರು ಒಂದು ವಚನ ನಮಗೆ ಹೇಳಿ ಕೊಡುತ್ತಿದ್ದರು

* ಹಝ್‌ರತ್ ಅಬೂ ಮುಅಮ್ಮಿರ್ ಅವರಿಂದ ವರದಿಯಾಗಿದೆ, ನಾನು ಹಝ್‌ರತ್ ಖಬ್ಬಾಬ್ ಬಿನ್ ಅರತ್‌ರೊಡನೆ ಕೇಳಿದೆ: ನಬಿ(ಸ) ರವರು ಝುಹರ್, ಅಸರ್ ನಮಾಝ್‌ಗಳಲ್ಲಿ ಪವಿತ್ರ ಖುರ್‌ಆನ್ ಪಠಿಸುತ್ತಿದ್ದರೆ? ಅವರು ಹೇಳಿದರು ಹೌದು. ನಾನು ಕೇಳಿದೆ ಹುಝೂರ್(ಸ) ಪಠಿಸುವ ಜ್ಞಾನ ನಿಮಗೆ ಹೇಗೆ ಆಗುತ್ತಿತ್ತು? ಹೇಳಿದರು: ಹುಝೂರ್(ಸ) ಪಠಿಸುವ ಜ್ಞಾನ ನಿಮಗೆ ಹೇಗೆ ಆಗುತ್ತಿತ್ತು? ಹೇಳಿದರು: ಹುಝೂರ್(ಸ) ರವರ ಪವಿತ್ರ ಗಡ್ಡ ಕೂದಲುಗಳು ಅಲ್ಲಾಡುವ ಮೂಲಕ.
* ಅಬೂ ಖತಾದಯಿಯವರಿಂದ ವರದಿಯಾಗಿದೆ: ನಬಿ(ಸ) ಝುಹರ್ ಅಸರ್ ನಮಾಝ್‌ಗಳ ಎರಡು ರಕಅತ್‌ಗಳಲ್ಲಿ ಸೂರತುಲ್ ಫಾತಿಹ ಮತ್ತು ಯಾವುದಾದರೊಂದು ಸೂರಃ ಪಠಿಸುತ್ತಿದ್ದರು ಒಮ್ಮೊಮ್ಮೆ ನಮಗೂ ಯಾವುದಾದರೊಂದು ವಚನ ಹೇಳುತ್ತಿದ್ದರು.
* ಹಝ್‌ರತ್ ಬಿರಾಹ್(ರ) ವರದಿ ಮಾಡುತ್ತಾರೆ, ನಾನು ನಬಿ(ಸ) ರವರನ್ನು ಇಶಾಅ್ ನಮಾಝಿನಲ್ಲಿ ಸೂರಃ ವತ್ತೀನಿ ವಝ್ಝೈತೂನ್ ಓದುತ್ತಿರುವುದನ್ನು ಕೇಳಿದ್ದೇನೆ ಅವರಿಗಿಂತ ಒಳ್ಳೆಯ ಖಿರತ್ ಹಾಗೂ ಧ್ವನಿ ಇನ್ನಾರಿಂದಲೂ ನಾನು ಕೇಳಲಿಲ್ಲ.
* ಹಝ್‌ರತ್ ಜಾಬಿರ್ ಬಿನ್ ಸಮ್ರಾ ವರದಿ ಮಾಡುತ್ತಾರೆ, ಹಝ್‌ರತ್ ಉಮರ್(ರ) ಹಝ್‌ರತ್ ಸಅದ್ ಬಿನ್ ಅಬಿ ವಖ್ಖಾಸ್‌ರೊಡನೆ ಹೇಳಿದರು: ಜನರು ನಿಮ್ಮ ಎಲ್ಲ ಮಾತುಗಳಲ್ಲೂ ದೂರನ್ನು ನೀಡುತ್ತಿದ್ದರು, ನಮಾಝ್ ವಿಷಯದಲ್ಲಿಯೂ ಸಹ. ಹಝ್‌ರತ್ ಸಅದ್(ರ) ಹೇಳಿದರು: ನಾನಂತೂ ಮೊದಲ ಎರಡು ರಕಅತ್‌ಗಳನ್ನು ದೀರ್ಘವಾಗಿ ಓದಿಸುತ್ತೇನೆ ಮತ್ತು ಹಿಂದಿನ ಎರಡನ್ನು ಲಘುವಾಗಿ, ನಾನು ರಸೂಲುಲ್ಲಾಹ್(ಸ) ರವರ ಅನುಸರಣೆಯಲ್ಲಿ ಅಲಕ್ಷ್ಯವಹಿಸುವುದಿಲ್ಲ. ಹಝ್‌ರತ್ ಉಮರ್(ರ) ಹೇಳಿದರು: ನೀವು ಸತ್ಯವನ್ನೆ ಹೇಳಿದ್ದೀರಿ ನಿಮ್ಮ ಪೈಕಿ ಹೀಗೆಯೇ ಭಾವಿಸಿದ್ದೆ ಅಥವಾ ಹೇಳಿದರು: ನಿಮ್ಮ ಬಗ್ಗೆ ಅದೇ ಗುಮಾನಿ ನಾನು ಹೊಂದಿದ್ದೆ. **(ಸಹಿ ಬುಖಾರಿ ಸಂಪುಟ–2, ಕಿತಾಬುಲ್ ಅಝಾನ್)**

## ಅಲ್ಲಾಹನ ಎಲ್ಲಾ ಪ್ರವಾದಿಗಳ ಮೇಲೆ ವಿಶ್ವಾಸವುಳ್ಳವನೇ ನಿಜವಾದ ಮುಸ್ಲಿಮನು: ನಾನು ಮುಸ್ಲಿಮರ ಗಮನ ಸೆಳೆಯ ಬಯಸುವುದೇನೆಂದರೆ ಮಸೀಹ್ ಮೌಊದ್‌ರ ದಾವೆಯನ್ನು ಅಲಕ್ಷ ವಹಿಸಿ ನೋಡಬಾರದು ಅದರಿಂದ ಇಸ್ಲಾಮ್ ಧರ್ಮದಂತಹ ಅಮೂಲ್ಯವಾದ ವಸ್ತು ಕೈಯಿಂದ ಜಾರುವ ಸಂಭವವಿದೆ:

**ಖೂಲು ಆಮನ್ನ ಬಿಲ್ಲಾಹಿ ವಮಾ ಉನ್‌ಝಿಲ ಇಲೈನಾ ವಮಾ ಉನ್‌ಝಿಲ ಇಲಾ ಇಬ್ರಾಹೀಮ ವ ಇಸ್ಮಾಯೀಲ ವ ಇಸ್ಹಾಖ ವ ಯಾಖೂಬ ವಲ್‌ಅಸ್ಬಾತಿ ವಮಾಊತಿಯ ಮೂಸಾ ವ ಈಸಾ ವಮಾ ಊತಿಯನ್ನಬೀಯ್ಯೂನ ಮಿನ್ ರಬ್ಬಿಹಿಮ್. ಲಾ ನುಫರ್ರಿಖು ಬೈನ ಅಹದಿಮ್ಮಿನ್ ಹುಮ್ ವ ನಹ್‌ನು ಲಹೂ ಮುಸ್‌ಲಿಮೂನ್** (ಅಲ್‌ಬಖರ: 137) ರ ವ್ಯಾಖ್ಯಾನ ಬರೆಯುತ್ತಾ ಹಝ್‌ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ:

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰه

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِي الْعَالَمِ ۞ شَرُّ السُّمُوْمِ عَدَاوَةُ الصُّلَحَاءِ

## ಸುರ್ಮ ಚಶ್ಮ ಆರ್ಯ ಗ್ರಂಥದ ರದ್ದು ಬರೆದರೆ ಐದು ನೂರು ರೂಪಾಯಿಗಳ ಭವ್ಯವಾದ ಬಹುಮಾನದ ಪಂಥಾಹ್ವಾನ

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಪ್ರಖ್ಯಾತವಾದ ಗ್ರಂಥ ಸುರ್ಮ ಚಶ್ಮ ಆರ್ಯದ ಪುಟ ಸಂಖ್ಯೆ 321ರಲ್ಲಿ ಈ ಗ್ರಂಥದ ವಿಷಯವನ್ನು ರದ್ದುಗೊಳಿಸಿದರೆ ಬರೆದವರಿಗೆ ಐದು ನೂರು ರೂಪಾಯಿಗಳ ಬಹುಮಾನದ ಪಂಥಹ್ವಾನದ ಜಾಹಿರಾತನ್ನು ಪ್ರಕಟಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: "ಈ ಗ್ರಂಥದ ಅಂದರೆ ಸುರ್ಮ ಚಶ್ಮ ಆರ್ಯ– ಲಾಲಾ ಮುರಳಿಧರ್ ಸಾಹೇಬ್ ಕಲಾ ಶಿಕ್ಷಕರು ಹೋಶಿಯಾರ್‌ಪುರ ನಡುವೆ ಚರ್ಚಾ ಸ್ಪರ್ಧೆಯ ಸಮಯದಲ್ಲಿ ಬರೆಯಲಾಗಿತ್ತು. ಅವು ವೇದಗಳ ಮಿಥ್ಯ ನಂಬಿಕೆಗಳನ್ನು ಸಾರಾಸಗಟಾಗಿ ತಳ್ಳಿ ಹಾಕುತ್ತಿದ್ದವು ಮತ್ತು ಈ ದಾವೆ ಪೂರ್ಣ ವಿಶ್ವಾಸದಿಂದ ಬರೆಯಲಾಗಿತ್ತು. ಯಾವ ಆರ್ಯನು ಈ ಗ್ರಂಥವನ್ನು ರದ್ದುಪಡಿಸಲು ಸಾಧ್ಯವಿಲ್ಲ ಏಕೆಂದರೆ ಸತ್ಯದ ಮುಂದೆ ಮಿಥ್ಯವು ನಿಲ್ಲಲು ಸಾಧ್ಯವಿಲ್ಲ. ಯಾವ ಆರ್ಯನೇ ಆಗಿರಲಿ, ಈ ಗ್ರಂಥದಲ್ಲಿ ಬರೆಯಲಾದ ವೇದದ ಎಲ್ಲ ತತ್ವಗಳನ್ನು ನಂಬಿಕೆಗಳನ್ನು ಈಗಲೂ ಸತ್ಯವೆಂದು ಭಾವಿಸುವುದಾದರೆ, ಈಗಲೂ ವೇದವನ್ನು ಮತ್ತು ಅದರ ತತ್ವಗಳನ್ನು ಈಶ್ವರನೇ ಬರೆದಿರುವನು ಎಂದು ಭಾವಿಸುವುದಾದರೆ ಅವನಿಗೆ ಅದೇ ಈಶ್ವರನ ಆಣೆ ಮಾಡಿ ಹೇಳುತ್ತೇನೆ, ಈ ಗ್ರಂಥದ ವಿಷಯಗಳನ್ನು ರದ್ದುಗೊಳಿಸಿ ತೋರಿಸಲಿ ಮತ್ತು ಐದು ನೂರು ರೂಪಾಯಿಗಳ ಬಹುಮಾನ ಪಡೆಯಲಿ. ಈ ಐದು ನೂರು ರುಪಾಯಿಗಳನ್ನು ಮೂರನೇ ನಿರ್ಣಾಯಕರಾದ ಯಾವ ಪಾದರಿ ಆಗಲಿ ಅಥವಾ ಬ್ರಹ್ಮೋ ಸಾಹಿಬರಾಗಲಿ ದೃಢಪಡಿಸಿದ ನಂತರ ಕೊಡಲಾಗುವುದು. ನನಗಂತೂ ಮುನ್‌ಶಿ ಜೀವನ್‌ದಾಸ್ ಸಾಹಿಬ್ ಕಾರ್ಯದರ್ಶಿ ಆರ್ಯ ಸಮಾಜ ಆಗಲಿ ಅಥವಾ ಅಕ್ಕಪಕ್ಕದ ಆರ್ಯ ಸಾಹಿಬರಲ್ಲಿ ಯಾರೇ ಆಗಲಿ, ಸಜ್ಜನ ಸ್ವಭಾವದವರು, ಮರ್ಯಾದಸ್ತರು ಅದಕ್ಕೆ ವಿರುದ್ದ ಬರೆದು ಮುದ್ರಿಸಿ ಮತ್ತು ಸಾರ್ವಜನಿಕವಾಗಿ ಪ್ರಕಟಣೆ ನೀಡಿದ ನಂತರ, ಸಾರ್ವಜನಿಕ ಸಭೆಯಲ್ಲಿ ಎಲ್ಲ ಮುಸ್ಲಿಮ್ ಮತಪಂಡಿತರು, ಆರ್ಯರು, ಮಾನನೀಯ ಕ್ರೈಸ್ತರು ಮುಂತಾದವರು ತಮ್ಮ ಪ್ರೀತಿಯ ಪುತ್ರರ ಮೇಲೆ ಆಣೆ ಮಾಡಿಕೊಳ್ಳಲಿ, ಹೌದು ನನ್ನ ಹೃದಯವು ಪೂರ್ಣ ರೀತಿಯಲ್ಲಿ ನಂಬಿಕೆ ಹೊಂದಿದೆ. "ಸುರ್ಮ ಚಶ್ಮ ಆರ್ಯ ಗ್ರಂಥದಲ್ಲಿ ಬರೆದಂತಹ ಎಲ್ಲಾ ಆಕ್ಷೇಪಗಳು ಪ್ರಾರಂಭದಿಂದ ಕೊನೆಯವರೆಗೆ ಓದಿದ್ದೇನೆ ಮತ್ತು ಚೆನ್ನಾಗಿ ತಿಳಿದುಕೊಂಡಿದ್ದೇನೆ ನನ್ನ ಬರವಣಿಗೆಯಿಂದ ಅದು ರದ್ದುಗೊಂಡಿದೆ. ಈ ಮಾತು ನಾನು ಆತ್ಮೀಯವಾಗಿ ಮತ್ತು ಪೂರ್ಣ ಸತ್ಯದಿಂದ ಹೇಳುತ್ತಿಲ್ಲವೆಂದರೆ ಅದರ ಶಾಪ ಪಾಪ ತಾಪ ಇದೇ ಲೋಕದಲ್ಲಿ ನನ್ನ ಮೇಲೆ ಮತ್ತು ನನ್ನ ಸಂತಾನದ ಮೇಲೆ ಬೀಳುವಂತಾಗಲಿ. ಈ ರೀತಿ ಆಣೆ ಮಾಡಿದ ನಂತರ ಕೇವಲ ಮುನ್‌ಶಿ ಸಾಹೇಬರ ಸಾಕ್ಷಿ ಮಾತ್ರಕ್ಕೆ ಐದು ನೂರು ರುಪಾಯಿಗಳ ನಗದು ರದ್ದು ಬರೆದವನಿಗೆ ಅದೇ ಸಾರ್ವಜನಿಕ ಸಭೆಯಲ್ಲಿ ಬಹುಮಾನ ರೂಪದಲ್ಲಿ ನೀಡುವೆನು. ಮುನ್‌ಶಿ ಸಾಹೇಬರು ಸುರಕ್ಷಿತವಿದ್ದರೆ ಅದು ಆರ್ಯ ಸಾಹೇಬರಿಗೆ ನಿಸ್ಸಂದೇಹವಾಗಿಯೂ ಅವರು ತಮ್ಮ ಸತ್ಯಕ್ಕಾಗಿ ನೀಡಿದ ಶಪಥ ಆಣೆ ಸತ್ಯವಾಗಿದೆ ಎಂದು. **"ವಸ್ಸಲಾಮು ಅಲಾ ಮನಿತ್ತಬಅಲ್ ಹುದಾ"**

ಸಂಯ್ಯದುನಾ ಹರುಝ್‌ರತ್ ವುಸೀಹ್ ವೌಊದ್ ಅಲೈಹಿಸ್ಸಲಾಮ್‌ರವರಂತೂ ಎಲ್ಲ ಆರ್ಯರಿಗೂ ಹಿಂದೂಗಳಿಗೂ ಅದರ ರದ್ದುಪಡಿಸುವ ಬರಹ ಬರೆಯಲು ಅಹ್ವಾನ ನೀಡಿದ್ದರು. ಆದರೆ ಲಾಲಾ ಮುರಳಿಧರ ಅವರ ಮೊದಲ ಕರ್ತವ್ಯವಾಗಿತ್ತು ಅದರ ರದ್ದುಪಡಿಸುವ ಬರಹ ಬರೆಯುವುದು. ಏಕೆಂದರೆ ಅವರಿಗೆ ಸ್ವಯಂ ಹರುಝ್‌ರತ್ ವುಸೀಹ್ ವೌಊದ್ ಅಲೈಹಿಸ್ಸಲಾಮ್‌ರವರ ಒಂದೇ ಒಂದು ಆಕ್ಷೇಪದ ಉತ್ತರ ನೀಡಲು ಸಾಧ್ಯವಾಗಲಿಲ್ಲ. ಅವರಿಂದ ಇಡೀ ಗ್ರಂಥದ ವಿರುದ್ದ ಬರೆಯಲು ಹೇಗೆ ಸಾಧ್ಯವಾದೀತು? ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಪುಸ್ತಕದಲ್ಲಿ ಇನ್ನು ಹಲವು ಪಂಥಹ್ವಾನಗಳನ್ನು ಲಾಲಾ ಸಾಹೆಬರಿಗೆ ನೀಡಿದ್ದರು. ಅಲ್ಲದೆ ದೃಷ್ಟಾಂತಗಳನ್ನು ನೋಡಲು ವಾಗ್ದಾನ ನೀಡಿದ್ದರು. ಏಕೆಂದರೆ ಲಾಲಾ ಸಾಹಿಬ್ ಹೇಗಾದರೂ ಮಾಡಿ ಇಸ್ಲಾಮಿನ ಸತ್ಯವನ್ನು ತಿಳಿಯುವಂತಾಗಲಿ ಎಂದು. ಆದರೆ ಲಾಲಾ ಸಾಹಿಬ್ ಯಾವ ಪಂಥಾಹ್ವಾನವಾಗಲಿ ದೃಷ್ಟಾಂತಗಳು ಕಾಣಲು ಒಪ್ಪಲಿಲ್ಲ. ಅಂದರೆ ಈ ವ್ಯಕ್ತಿ ಒಂದು ಲಘುವಾದ ಅಹ್ವಾನವನ್ನು ಸ್ವೀಕರಿಸಲಿಲ್ಲ. ಅವನಿಗೆ ಇಂತಹದೊಂದು ಬೃಹತ್ ದರ್ಜೆಯ ಮತ್ತು ಭವ್ಯವಾದ ಅಹ್ವಾನ ಹೇಗೆ ಸ್ವೀಕರಿಸಲು ಸಾಧ್ಯವಾಗಬಹುದಾಗಿತ್ತು. ವಾಸ್ತವದಲ್ಲಿ ಲಾಲಾ ಸಾಹೇಬರ ನಿಯತ್ತು ಸತ್ಯಶೋಧನೆಯಾಗಿರಲಿಲ್ಲ. ಅವರು ಕೇವಲ ಆಕ್ಷೇಪ ಮಾಡುತ್ತಿದ್ದರು ಲಾಲಾ ಸಾಹಿಬರಾಗಲಿ ಇನ್ನೊಬ್ಬರಾಗಲಿ ಸುರ್ಮ ಚಶ್ಮ ಆರ್ಯದ ವಿರುದ್ದ ಬರೆಯಲು ಯಾರು ಸಾಹಸ ತೋರಲಿಲ್ಲ. ಈ ಕೆಳಗೆ ನಾವು ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಯಾವ ಸಾಕ್ಷಗಳನ್ನು ರದ್ದು ಪಡಿಸಲು ಆಹ್ವಾನಿಸಿದರು ಮತ್ತು ಐದು ನೂರು ರುಪಾಯಿಗಳ ಬಹುಮಾನ ಘೋಷಿಸಿದ್ದರು ಅದನ್ನು ಪ್ರಸ್ತುತಪಡಿಸುತ್ತಿದ್ದೆನೆ.

### ಆರ್ಯರಿಗೆ ದೈವಿಕ ನಿಯಮಗಳ ಕುರಿತು ಹೆಸರು ಸಹ ತೆಗೆದುಕೊಳ್ಳಬಾರದು

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಓ ಮಹಾನೀಯರಾದ ಆರ್ಯ ಸಾಹಿಬರೆ!! ಸರ್ವ ಲೋಕದ ದೈವಿಕ ನಿಯಮಗಳಿಗೆ ಒಪ್ಪಿಗೆ ಸೂಚಿಸದೆ, ನಿಮಗೆ ಒಪ್ಪಿಕೊಳ್ಳಲು ಬೇರೆ ಯಾವ ಮಾರ್ಗವೂ ಇಲ್ಲ. ಏಕೆಂದರೆ ನಿಮ್ಮ ಪುನರ್ಜನ್ಮ ಪದ್ಧತಿ ದೈವಿಕ ನಿಯಮಗಳ ವಿರುದ್ಧವಾಗಿದೆ. ಯಾವ ರೀತಿ ಎಂದರೆ ಒಂದನ್ನು ಒಪ್ಪಿಕೊಂಡರೆ ಇನ್ನೊಂದು ಉಳಿಯುವುದಿಲ್ಲ. ಏಕೆಂದರೆ ದೇವನ ಸರ್ವ ಸಮರ್ಥನೆಯನ್ನು ಒಪ್ಪಿಕೊಂಡರೆ ಎಲ್ಲ ಸೌರಮಂಡಲ ಮತ್ತು ಭೌತಿಕ ಲೋಕವನ್ನು ತನ್ನ ದೈವಿಕ ಶಕ್ತಿಯಿಂದ ಸೃಷ್ಟಿಸಿ, ಬ್ರಹ್ಮಾಂಡವನ್ನು ಪರಸ್ಪರ ಬಲಗೊಳಿಸಿದರೆ ಮತ್ತು ತನ್ನ ಸಂಪೂರ್ಣ ಸಾಮರ್ಥ್ಯದಿಂದ ಮತ್ತು ತನ್ನದೇ ವಿಶೇಷ ಇಷ್ಟದಿಂದ ಎಲ್ಲ ಭೌತಿಕ ಹಾಗೂ ಅಲೌಕಿಕವನ್ನು ಒಂದು ಜಾಣ್ಮೆಯಿಂದ, ಎಲ್ಲ ವ್ಯವಸ್ಥೆಗಳನ್ನು ತನ್ನದೆ ಆದ ಜಾಣ್ಮೆಯಿಂದ ಸೃಷ್ಟಿಸಿದ್ದಾರೆ ಎಂದು ಒಪ್ಪಬೇಕಾಗುತ್ತದೆ. ಇದರ ಇನ್ನೊಂದು ಹೆಸರೇ ದೈವಿಕ ನಿಯಮಗಳು ಅದು ನಿಮ್ಮ ಪುನರ್ಜನ್ಮ ತತ್ವವನ್ನು ನಿರ್ನಾಮಗೊಳಿಸುತ್ತದೆ. ಕಾರಣವೇನೆಂದರೆ ನಿಮ್ಮ ಜನ್ಮವೂ ಪುನರ್ಜನ್ಮ ಸಮಸ್ಯೆಯಿಂದ ಸೃಷ್ಟಿಯಾಗಿದೆ. ಪರಮೇಶ್ವರನ ಶಕ್ತಿಯಿಂದ ಸೃಷ್ಟಿಯಾಗಲಿಲ್ಲ. ಆತನ ಜಾಣ್ಮೆಗೂ ಇದರಲ್ಲಿ ಅಸ್ಪದವಿಲ್ಲ, ಬದಲು ಪಾಪಿಗಳ ಪಾಪವೂ ಈ ವಿವಿದ ರೂಪಗಳಿಗೆ ಕಾರಣಕರ್ತವಾಗಿದೆ. ಅದರಲ್ಲಿ ಪರಮೇಶ್ವರ ಯಾವ ಕೈವಾಡವೂ ಇಲ್ಲ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–132–133)

### ಪುನರ್ಜನ್ಮ ವಿಶ್ವಾಸದಿಂದ ಹಲಾಲ್ ಮತ್ತು ಹರಾಮ್ ಗುರುತಿಸುವುದರಲ್ಲಿ ಗೊಂದಲ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಪುನರ್ಜನ್ಮ ಸರಿ ಎಂದಾದರೆ ಅದರನ್ವಯ ಒಬ್ಬ ವ್ಯಕ್ತಿಯ ತಾಯಿ ಅಥವಾ ಮಗಳು ಅಥವಾ ಸಹೋದರಿ ಅಥವ ಅಜ್ಜ ಮೃತ್ಯುವಿನ ನಂತರ ಯಾವುದೇ ಸ್ತ್ರೀಯ ಆತ್ಮದಲ್ಲಿ ಬಿದ್ದು ಮತ್ತದೇ ವ್ಯಕ್ತಿಯ ವಿವಾಹದಲ್ಲಿ ಬರಬಹುದಾಗಿದೆ. ಅದರಿಂದ ಆತನ ತಾಯಿ ಅಥವಾ ಮಗಳಾಗಿದ್ದಾಳೆ. ಈ ಲೋಕವಂತೂ ಒಂದು ಅಂಧಕಾರಮಯ ಸ್ಥಳವಾಗಿದೆ ಅದರಲ್ಲಿ ಒಂದು ಸುದ್ದಿ ತಿಳಿಸಬಹುದಾಗಿದೆ. ಓ ಎಲೇ ಮಾನವನೇ! ಅವಳನ್ನು ಮದುವೆ ಮಾಡಿಕೊಳ್ಳಬೇಡ ಅವಳು ನಿನ್ನ ತಾಯಿ ಅಥವಾ ಸಹೋದರಿ ಅಥವಾ ಅಜ್ಜಿಯಾಗಿರಬಹುದು ಎಂದು. ಆದುದರಿಂದ ಯೋಚಿಸಿ ನೋಡಿರಿ ಈ ಪುನರ್ಜನ್ಮ ಪದ್ಧತಿಯು ಕೇವಲ ನಿಮ್ಮ ಪರಮೇಶ್ವರನ ಗೌರವದ ಮೇಲೆ ಕೈ ಮಾಡಲಿಲ್ಲ ಬದಲು ಇದರಲ್ಲಿ ಎಂತಹ ದೋಷಗಳು ಇವೆ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–137)

### ಲಗತ್ತಿಸುವುದು ಜೋಡಿಸುವುದು ಸೃಷ್ಟಿಸುವ ಮುಂದೆ ಒಂದು ಅನರ್ಥ ಹಾಗೂ ಲಘುವಾದ ಕಾರ್ಯವಾಗಿದೆ:

ಆರ್ಯರ ವಿಶ್ವಾಸವೇನೆಂದರೆ ಅಲ್ಲಾಹನು ಆತ್ಮಗಳ ಮತ್ತು ದೇಹಗಳ ಸೃಷ್ಟಿಕರ್ತನಲ್ಲ. ಅವನು ಕೇವಲ ಆತ್ಮಗಳನ್ನು ಮತ್ತು ದೇಹಗಳನ್ನು ಜೋಡಿಸುತ್ತಾನೆ, ಈ ಬಗ್ಗೆ ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ನಿಮ್ಮನ್ನು ಕೇಳಬಯಸುತ್ತೇನೆ, ಸೃಷ್ಟಿಸುವುದು ದೊಡ್ಡ ಕೆಲಸವಾಗಿದೆ ಆದುದರಿಂದ ನಿಮ್ಮ ವಿಚಿತ್ರವಾದ ಬುದ್ಧಿಯು ಇದನ್ನು ಒಪ್ಪುತ್ತದೆಯಾದರೆ ಎಲ್ಲ ಆತ್ಮಗಳನ್ನು ಅದರ ವಿಶೇಷ ಗುಣಗಳೊಂದಿಗೆ ಸೃಷ್ಟಿಸದೆ ಎಲ್ಲವೂ ತನ್ನಂತಾನೆ ಅನಾದಿ ಕಾಲದಿಂದ ಅಸ್ತಿತ್ವದಲ್ಲಿದೆ, ಎಂದಾದರೆ ನಿವು ಅನಿವಾರ್ಯವಾಗಿ ಒಪ್ಪಬೇಕಾಗಿರುವುದೇನೆಂದರೆ ಕೆಲವು ವಸ್ತುಗಳು ತನ್ನಂತಾನೆ ಜೋಡಿಸಲ್ಪಡಬಹುದು ಎಂದು, ಏಕೆಂದರೆ ಜೋಡಿಸಲ್ಪಡುವುದು ಸೃಷ್ಟಿಗಿಂತ ಕೇಳಗಿರುವುದಾಗಿದೆ. ಆದುದರಿಂದ ಕೀಳಾದುದು ತನ್ನಂತಾನೆ ಅಸ್ತಿತ್ವ ಹೊಂದಬಹುದಾಗಿದೆ." (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–204)

### ಉತ್ತಮ ಮತ್ತು ಉನ್ನತ ಕೆಲಸ ತನ್ನಷ್ಟಕ್ಕೆ ಆದರೆ ಕೀಲು ಮತ್ತು ಅನರ್ಥ ಕಾರ್ಯ ಪರಮೇಶ್ವರನಿಂದ:

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಏನೆಲ್ಲ ವಿಶೇಷತೆಗಳು ಉತ್ತಮ ಗುಣಗಳು ಆತ್ಮಗಳಲ್ಲಿ ತುಂಬಿದೆಯೋ ಅವು ಕೇವಲ ಜೋಡನೆಯಿಂದ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ. ಉದಾಹರಣೆಗೆ ಆತ್ಮಗಳಲ್ಲಿ ಒಂದು ದಿವ್ಯದರ್ಶನದ ಶಕ್ತಿ ಇದೆ ಅದರಿಂದ ಅದು ಗೌಪ್ಯ ವಿಷಯಗಳನ್ನು ತನ್ನ ಪ್ರಯತ್ನಗಳಿಂದ ಕಾಣಬಹುದಾಗಿದೆ. ಅವರಲ್ಲಿ ಇನ್ನೊಂದು ಬೌದ್ಧಿಕ ಶಕ್ತಿ

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: 'ತಲ್‌ಹಾ ಮತ್ತುಝುಬೇರ್ ಸ್ವರ್ಗದಲ್ಲಿ ನನ್ನ ಸಹಚರರಾಗಿರುವರು.'**

---

**ಝುಬೇರ್ ರಝಿಯಲ್ಲಾಹು ಅನ್‌ಹು ದೀನಿನ ಸ್ತಂಭಗಳಲ್ಲಿ ಒಂದು ಸ್ತಂಭವಾಗಿರುವರು.**

**ಪ್ರವಾದಿ ಮುಹಮ್ಮದ್(ಸ)ರವರ ಹವಾರಿ ಹಾಗೂ ನಿಷ್ಠೆಯ ಸಂಬಂಧ ಹೋಂದಿದ ಬದರಿ ಸಹಾಬಿಯಾದ ಹಝ್ರತ್ ಝುಬೈರ್ ಬಿನ್ ಅವಾಮ್(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ.**

**ಇತ್ತೀಚೆಗೆ ನಿಧನ ಹೊಂದಿದ ಮೂರು ದಿವಂಗತರು ಮುಕರ್‍ರಮ್ ಅಲ್‌ಹಾಜ್ ಇಬ್ರಾಹೀಮ್ ಮಬಾಎ ಸಾಹಿಬ್, ಮುಕರ್‍ರಮ್ ನೀಮ್ ಅಹ್ಮದ್ ಖಾನ್ ಸಾಹಿಬ್, ಹಾಗೂ ಠೇಕೆದಾರ್ ವಲಿ ಮುಹಮ್ಮದ್ ಸಾಹಿಬ್ ಜರ್ಮನಿರವರ ಧರ್ಮಪತ್ನಿ ಮುಕರ್‍ರಮ ಬುಶ್ರ ಬೆಗಮ್ ಸಾಹಿಬ ಅವರೆಲ್ಲರ ಸದ್ಗುಣಗಳ ಪ್ರಸ್ತಾವನೆ ಮತ್ತು ಅವರೆಲ್ಲರ ನಮಾಝೆ ಜನಾಝ ಗಾಯಿಬ್ ನಿರ್ವಹಣೆ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **04–09–2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَ اِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಪವಿತ್ರ ಖುರ್‌ಆನಿನಲ್ಲಿ ಅಲ್ಲಾಹನು ಹೇಳುತ್ತೇನೆ: **ಅಲ್ಲಝೀನಸ್ತಜಾಬು ಲಿಲ್ಲಾಹಿ ಡರ್‍ರಸೂಲಿ ಮಿಮ್ ಬಅದಿ ಮಾ ಅಸಾಬಹುಮುಲ್ ಖರ್‌ಹು. ಲಿಲ್ಲಝೀನ ಅಹ್‌ಸನು ಮಿನ್‌ಹುಮ್ ಡತ್ತಖೌ ಅಜ್ರುನ್ ಅಝೀಮ್** (ಆಲಿ ಇಮ್ರಾನ್: 173) 'ತಮಗೆ ಘಾಸಿಯಾದ ನಂತರ (ಕೂಡ) ಅಲ್ಲಾಹನ ಮತ್ತು ಸಂದೇಶವಾಹಕನ ಕರೆಗೆ ಓಗೊಟ್ಟವರ ಪೈಕಿ ಸತ್ಕರ್ಮ ಮಾಡಿದವರಿಗೂ ದೇವಭಕ್ತರಿಗೂ ಮಹತ್ತಾದ ಪ್ರತಿಫಲವಿದೆ.' (ಆಲೇ ಇಮ್ರಾನ್)

ಸಹಾಬರ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರವರ ಬಗ್ಗೆ ಸ್ವಲ್ಪ ಹೇಳಲು ಬಾಕಿಯಿತ್ತು. ಇಂದು ನಾನು ಅದನ್ನೇ ಹೇಳುವೆನು. ನಾನೀಗ ಓದಿದ ಆಯತನ್ನು ಪ್ರಸ್ತಾಪಿಸುತ್ತಾ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ತಮ್ಮ ಸಹೋದರಿ ಪುತ್ರನಾದ ಉರ್‌ವಾರೊಡನೆ ಹೇಳಿದರು: 'ಹೇ ನನ್ನ ಸೋದರಳಿಯ, ನಿನ್ನ ಪೂರ್ವಜರಾದ ಝುಬೇರ್ ರಝಿಯಲ್ಲಾಹು ಅನ್‌ಹು ಮತ್ತು ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಈ ಆಯತಿನಲ್ಲಿ ಹೇಳಲಾದ ಸಹಾಬಿಯರಲ್ಲಿ ಒಳಪಟ್ಟಿದ್ದರು.' ಉಹದ್ ಯುದ್ಧದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಗಾಯಗೊಂಡ ನಂತರ, ಮುಶ್ರಿಕರು ಯುದ್ಧ ಮೈದಾನದಿಂದ ಮರಳಿಹೋದರು. ಆದರೆ ಅವರು ಪುನಃ ಮರಳಿ ಬಂದು ಆಕ್ರಮಣ ನಡೆಸುವ ಸಾಧ್ಯತೆಯಿದೆ ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅನಿಸುತ್ತಿತ್ತು. ಆದ್ದರಿಂದ' ಅವರನ್ನು ಹಿಂಬಾಲಿಸಲು ಯಾರೆಲ್ಲ ತಯಾರಿದ್ದಾರೆ' ಎಂದು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಕೇಳಿದರು. ತಕ್ಷಣವೇ ಎಪ್ಪತ್ತು ಸಹಾಬಿ ವರ್ಯರು ಇದಕ್ಕಾಗಿ ತಯಾರಾದರು. ಝುಬೇರ್ ರಝಿಯಲ್ಲಾಹು ಅನ್‌ಹು ಮತ್ತು ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಇವರಲ್ಲಿ ಒಳಪಟ್ಟಿದ್ದರು ಎಂದು ವರದಿಗಾರ ಹೇಳುತ್ತಾರೆ. ಇದು ಸಹೀಹ್ ಬುಖಾರಿಯ ವರದಿಯಾಗಿದೆ. ಇವರಿಬ್ಬರೂ ಎಂದರೆ, ಝುಬೇರ್ ರಝಿಯಲ್ಲಾಹು ಅನ್‌ಹು ಮತ್ತು ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಗಾಯಗೊಂಡವರಲ್ಲಿ ಸೇರಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಮಗಾಝಿ, ಬಾಬ್ ಅಲ್ಲಝೀನಸ್ತಜಾಬುಲಿಲ್ಲಾಹಿ ವರ್‍ರಸೂಲಿ...... ಹದೀಸ್–4077)

ಸಹೀಹ್ ಮುಸ್ಲಿಮಿನಲ್ಲಿ ಈ ರೀತಿಯಲ್ಲಿ ಹಿಶಾಮ್ ತನ್ನತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ನನ್ನೊಂದಿಗೆ ಹೇಳಿದರು: 'ಗಾಯಗೊಂಡ ನಂತರವೂ ಅಲ್ಲಾಹನ ಮತ್ತು ಅವನ ಪ್ರವಾದಿಯ ಕರೆಗೆ ಓಗೊಟ್ಟವರಲ್ಲಿ ನಿನ್ನ ಪಿತಾಮಹರು ಸಹ ಒಳಪಟ್ಟಿದ್ದರು.' ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದಾಗಿ ನಾನು ಸ್ವತಃ ಕೇಳಿದ್ದೆ: 'ತಲ್‌ಹಾ ಮತ್ತುಝುಬೇರ್ ಸ್ವರ್ಗದಲ್ಲಿ ನನ್ನ ಸಹಚರರಾಗಿರುವರು.' (ಸಹೀಹ್ ಮುಸ್ಲಿಮ್, ಕಿತಾಬ್ ಫಝಾಎಲುಸ್ಸಹಾಬ, ಹದೀಸ್–2418)

ಹಝ್ರತ್ ಸಈದ್ ಬಿನ್ ಜುಬೇರ್ ಹೇಳುತ್ತಾರೆ: ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು, ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು, ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಸಅದ್ ರಝಿಯಲ್ಲಾಹು ಅನ್‌ಹು, ಹಝ್ರತ್ ಅಬ್ದುರ್ರಹ್ಮಾನ್ ರಝಿಯಲ್ಲಾಹು ಅನ್‌ಹು, ಹಝ್ರತ್ ಸಈದ್ ಬಿನ್ ಝೈದ್ ರಝಿಯಲ್ಲಾಹು ಅನ್‌ಹುರ ಸ್ಥಾನ ಹೇಗಿತ್ತೆಂದರೆ, ಅವರೆಲ್ಲರೂ ಯುದ್ಧ ಮೈದಾನದಲ್ಲಿ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮುಂದೆ ಮುಂದೆ ಹೋರಾಡುತ್ತಿದ್ದರು ಮತ್ತು ನಮಾಝಿನಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹಿಂದೆ ಇರುತ್ತಿದ್ದರು. (ಉಸದುಲ್‌ಗಾಬ ಫೀ ಮಾರಿಫತಿಸ್ಸಹಾಬ, ಸಂಪುಟ–2, ಪುಟ–478, ದಾರುಲ್ ಕುತುಬ್ ಇಲ್‌ಮಿಯ ಬೈರೂತ್)

ಹಝ್ರತ್ ಅಬ್ದುಲ್ಲಾಹ್ ಬಿನ್ ಅಖ್‌ನಸ್ ವರದಿ ಮಾಡುತ್ತಾರೆ. ಅವರು ಮಸೀದಿಯಲ್ಲಿ ಇದ್ದಾಗ ಒಬ್ಬ ವ್ಯಕ್ತಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಗ್ಗೆ ಅಪಮರ್ಯಾದೆಯಿಂದ ಮಾತನಾಡಿದನು. ಆಗ ಸಈದ್ ಬಿನ್ ಝೈದ್ ಎದ್ದು ನಿಂತು ಹೇಳಿದರು: ನಾನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾಗಿ ನಿಸ್ಸಂಶಯವಾಗಿಯೂ ಕೇಳಿದ್ದೇನೆ. ಅದೇನೆಂದರೆ, ಹತ್ತು ವ್ಯಕ್ತಿಗಳು ಸ್ವರ್ಗದಲ್ಲಿ ಹೋಗುವರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸ್ವರ್ಗದಲ್ಲಿ ಇರುವರು. ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು ಸ್ವರ್ಗಕ್ಕೆ ಹೋಗುವರು, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು, ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು, ಹಝ್ರತ್ ಝುಬೇರ್ ಬಿನ್ ಅವಾಮ್ ರಝಿಯಲ್ಲಾಹು ಅನ್‌ಹು, ಹಝ್ರತ್ ಸಅದ್ ಬಿನ್ ಮಾಲಿಕ್ ರಝಿಯಲ್ಲಾಹು ಅನ್‌ಹು, ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹು ಅನ್‌ಹು ಸ್ವರ್ಗದಲ್ಲಿ ಹೋಗುವರು. 'ನಾನು ಬೇಕಾದರೆ, ಹತ್ತನೇ ವ್ಯಕ್ತಿಯ ಹೆಸರು ಸಹ ಹೇಳಬಲ್ಲೆನು.' ಆಗ ಹತ್ತನೇ ವ್ಯಕ್ತಿ ಯಾರೆಂದು ಜನರು ಕೇಳಲು ತೊಡಗಿದರು. ಹಝ್ರತ್ ಸಈದ್ ಬಿನ್ ಝೈದ್ ಅಲ್ಪ ಸಮಯ ಸುಮ್ಮನೆ ಇದ್ದರು. ಹತ್ತನೆಯ ವ್ಯಕ್ತಿ ಯಾರೆಂದು ಜನರು ಪುನಃ ಕೇಳಿದರು. ಆಗ ಸಈದ್ ಬಿನ್ ಝೈದ್ ಎಂದು ಹೇಳಲಾಯಿತು. ಎಂದರೆ, ಸ್ವತಃ ತನ್ನ ಹೆಸರನ್ನು ಹೇಳಿದರು. (ಸನನ್ ಸಬಿ ದಾವೂದ್, ಕಿತಾಬುಸ್ಸನ, ಹದೀಸ್–4649)

ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹುರ ಬಗ್ಗೆ ಪ್ರಸ್ತಾಪಿಸಿದ್ದ ಖುತ್‌ಬದಲ್ಲಿ ಇದನ್ನು ನಾನು ಹೇಳಿದ್ದೆ ಎಂದು ತೋರುತ್ತದೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹುರವರು ವಹ್ಯ್ ಬರೆಯುತ್ತಿದ್ದವರ ಹೆಸರನ್ನು ಪ್ರಸ್ತಾಪಿಸುತ್ತಾ ಹೇಳುತ್ತಾರೆ:

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣವಾಗುವಾಗ ಅದನ್ನು ಅದೇ ಸಮಯ ಬರೆಯಲಾಗುತ್ತಿತ್ತು. ಹೀಗೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಪವಿತ್ರ ಖುರ್‌ಆನಿನ ವಚನಗಳನ್ನು ಈ ಕೆಳಗಿನ ಹದಿನೈದು ವ್ಯಕ್ತಿಗಳಿಂದ ಬರೆಸುತ್ತಿದ್ದರು ಎಂದು ಚರಿತ್ರೆಯಿಂದ ಸಾಬೀತಾಗುತ್ತದೆ.

ಝೈದ್ ಬಿನ್ ಸಾಬಿತ್ ರಝಿಯಲ್ಲಾಹು ಅನ್‌ಹು, ಉಬಯ್ಯ್ ಬಿನ್ ಕಅಬ್ ರಝಿಯಲ್ಲಾಹು ಅನ್‌ಹು, ಅಬ್ದುಲ್ಲಾಹ್ ಬಿನ್ ಸಅದ್ ಬಿನ್ ಅಬೀ ಸರಹ್, ಝುಬೇರ್ ಬಿನ್ ಅವಾಮ್ ರಝಿಯಲ್ಲಾಹು ಅನ್‌ಹು, ಖಾಲಿದ್ ಬಿನ್ ಸಈದ್ ಬಿನ್ ಆಸ್ ರಝಿಯಲ್ಲಾಹು ಅನ್‌ಹು, ಹಬ್ಬಾನ್ ಬಿನ್ ಸಈದುಲ್ ಆಸ್ ರಝಿಯಲ್ಲಾಹು ಅನ್‌ಹು, ಹಂಝುಲ ಬಿನ್ ರಬೀಉಲ್ ಅಸದಿ ರಝಿಯಲ್ಲಾಹು ಅನ್‌ಹು, ಮುಈಖಬ್ ಬಿನ್ ಅಬೀ ಫಾತಿಮ ರಝಿಯಲ್ಲಾಹು ಅನ್‌ಹು, ಅಬ್ದುಲ್ಲಾಹ್ ಬಿನ್ ಅರ್ಖಮುಲ್ ಝುಹ್‌ರಿ ರಝಿಯಲ್ಲಾಹು ಅನ್‌ಹು, ಶರ್ಜೀಲ್ ಬಿನ್ ಹಸನ್ ರಝಿಯಲ್ಲಾಹು ಅನ್‌ಹು, ಅಬ್ದುಲ್ಲಾಹ್ ಬಿನ್ ರವಾಹ ರಝಿಯಲ್ಲಾಹು ಅನ್‌ಹು, ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಪವಿತ್ರ ಖುರ್‌ಆನಿನ ವಚನಗಳು ಅವತೀರ್ಣವಾಗುವಾಗ ಈ ವ್ಯಕ್ತಿಗಳಲ್ಲಿ ಯಾರನ್ನಾದರೂ ಕರೆಸಿಕೊಂಡು ವಹ್ಯ್ ಬರೆಸುತ್ತಿದ್ದರು. (ದೀಬಾಚ ಅತಫ್‌ಸೀರುಲ್ ಖುರ್‌ಆನ್, ಅನ್ವಾರುಲ್ ಉಲೂಮ್, ಸಂಪುಟ–20, ಪುಟ–425–426)

ಹಝ್ರತ್ ಅನಸ್ ಬಿನ್ ಮಾಲಿಕ್ ವರದಿ ಮಾಡುತ್ತಾರೆ: ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝುಬೇರ್ ಬಿನ್ ಅವಾಮರಿಗೆ ಒಂದು ಯುದ್ಧದ ವೇಳೆಯಲ್ಲಿ ಶರೀರದಲ್ಲಿ ತುರಿಕೆಯ ಕಾರಣ ರೇಶ್ಮೆಯ ಬಟ್ಟೆ ಧರಿಸಲು ಅನುಮತಿ ಕೊಟ್ಟಿದ್ದರು. (ಸಹೀಹ್ ಬುಖಾರಿ, ಕಿತಾಬುಲ್ ಜಿಹಾದ್ ವಸ್ಸೈರ್, ಹದೀಸ್–2919)

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಮದೀನದಲ್ಲಿ ಮನೆಗಳಿಗೆ ಸೀಮೆಯನ್ನು ನಿಶ್ಚಯಿಸಿ ಗಡಿಯನ್ನು ಗುರುತು ಹಾಕುವಾಗ ಹಝ್ರತ್ ಝುಬೇರ್‌ರಿಗೆ ಭೂಮಿಯ ಒಂದು ತುಂಡನ್ನು ನಿಶ್ಚಯಿಸಿದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝುಬೇರ್‌ರಿಗೆ ಖರ್ಜೂರದ ಒಂದು ತೋಟವನ್ನು ಸಹ ನೀಡಿದರು. (ಅತ್ತಬಖಾತುಲ್ ಕುಬ್ರ, ಸಂಪುಟ–3, ಪುಟ–76, ದಾರುಲ್ ಕುತುಬ್ ಇಲ್ಮಿಯ ಬೈರೂತ್ 1990)

ಹಝ್ರತ್ ಝುಬೇರ್‌ರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತುಂಡು ನೆಲವನ್ನು ಕಾಣಿಕೆಯಾಗಿ ಕೊಟ್ಟ ಬಗ್ಗೆ ವಿವರಿಸುತ್ತಾ ಹಝ್ರತ್ ಖಲೀಫತುಲ್ ಮಸೀಹ್ ಸಾನಿ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ:

ಹಝ್ರುರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಕುದುರೆ ಒಂದು ಉಸಿರಿಗೆ ಅಥವಾ ಒಂದು ಬಾರಿಗೆ ಎಷ್ಟು ದೂರಕ್ಕೆ ಓಡುತ್ತದೋ ಅಷ್ಟಿನ ವರೆಗಿನ ಭೂಮಿಯನ್ನು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝುಬೇರ್‌ರಿಗೆ ಸರ್ಕಾರಿ ಭೂಮಿಯಿಂದ ನೀಡಿದ್ದರು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ತಾನು ಸವಾರರಾಗಿದ್ದ ಕುದುರೆ ಎಲ್ಲಿ ನಿಂತಿತೋ ಅಲ್ಲಿಂದ ತನ್ನ ಲಾಠಿಯನ್ನು ಬಹಳ ಜೋರಾಗಿ ಮೇಲಕ್ಕೆ ಎಸೆದರು. ಅವರ ಕುದುರೆ ಎಲ್ಲಿ ನಿಂತಿತೋ ಅಷ್ಟು ಮಾತ್ರವಲ್ಲ, ಬದಲಿಗೆ ಅವರ ಚಾವಟಿ ಎಲ್ಲಿ ಬಿತ್ತೋ ಅಲ್ಲಿಯ ತನಕ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಭೂಮಿಯನ್ನು ಕೊಡಲು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತೀರ್ಮಾನಿಸಿದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ. ನಮ್ಮ ದೇಶದ ಕುದುರೆ ಸಹ ಮೈಲುಗಟ್ಟಲೆ ಓಡುತ್ತದೆ. ಅರಬ್ ರಾಜ್ಯದ ಕುದುರೆಯಂತು ಬಹಳ ಹೆಚ್ಚಿಗೆ ಓಡಬಹುದಾಗಿತ್ತು. ನಾಲ್ಕೈದು ಮೈಲುಗಳ ತನಕ ಕುದುರೆಯನ್ನು ಓಡಿಸಿದರೆ ಸಹ ಅವರಿಗೆ ಇಪ್ಪತ್ತು ಸಾವಿರ ಏಕರೆಯಷ್ಟು ಭೂಮಿ ಕೊಡಲಾಯಿತು ಎಂದು ಹೇಳಬಹುದು.

ಇಮಾಮ್ ಅಬೂ ಯೂಸುಫ್ ಕಿತಾಬುಲ್ ಖರಾಜಿನಲ್ಲಿ ಬರೆಯುತ್ತಾರೆ: ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಒಂದು ತುಂಡು ನೆಲವನ್ನು ಕೊಡುಗೆಯಾಗಿ ನೀಡಿದರು. ಅದರಲ್ಲಿ ಖರ್ಜೂರದ ಮರಗಳು ಸಹ ಇತ್ತು. ಆ ಗ್ರಾಮ ಯಾವುದೋ ಸಮಯದಲ್ಲಿ ಯಹೂದಿ ಗೋತ್ರವಾದ ಬನೂ ನಝೀರಿನ ಕೈವಶವಿತ್ತು. ಅದು ಮದೀನದಿಂದ ಮೂರು ಮೈಲು ದೂರದಲ್ಲಿ, ಎಂದರೆ ಶಾಮಿಗೆ ಹೋಗುವ ದಿಕ್ಕಿನಲ್ಲಿ ಇರುವ ಜರಫ್ ಎಂಬ ಹೆಸರಿನ ಒಂದು ಗ್ರಾಮವಾಗಿತ್ತು. ಹಿಂದಿನ ಹದೀಸುಗಳನ್ನು ಈ ಹದೀಸಿನೊಂದಿಗೆ ಸೇರಿಸಿ ನೋಡುವಾಗ ತಿಳಿದುಬರುವ ಸಂಗತಿಯೇನೆಂದರೆ, ಕುದುರೆ ಓಡಿಸಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ನೀಡಿದ ಇಪ್ಪತ್ತು ಸಾವಿರ ಏಕರೆ ಭೂಮಿ ನೀಡುವುದಕ್ಕೆ ಮುಂಚಿತವಾಗಿಯೇ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಈ ಖರ್ಜೂರದ ಮರಗಳು ಇರುವ ಗ್ರಾಮದ ಮಾಲಿಕರಾಗಿದ್ದರು. (ಇಸ್ಲಾಮ್ ಔರ್ ಮಿಲ್‌ಕಿಯತ್ ಝಮೀನ್, ಅನ್ವಾರುಲ್ ಉಲೂಮ್, ಸಂಪುಟ–21, ಪುಟ–429) (ಮುಜಮುಲ್ ಬಲದಾನ್, ಸಂಪುಟ–2, ಪುಟ–149, ದಾರುಲ್‌ಕುತುಬ್ ಇಲ್ಮಿಯ ಬೈರೂತ್)

ಮರ್ವಾನ್ ಬಿನ್ ಹಕಮ್ ಹೇಳಿದ್ದಾಗಿ ಉರ್ವ ಬಿನ್ ಝುಬೇರ್ ವರದಿ ಮಾಡುತ್ತಾರೆ: ನಾಸಿಕ ರಕ್ತಸ್ರಾವದ ರೋಗ ಹರಡಿದಾಗ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್‌ರಿಗೂ ತೀವ್ರ ಮೂಗಿನ ರಕ್ತಸ್ರಾವವಾಯಿತ್ತು. ಆದ ಕಾರಣ ಅವರಿಗೆ ಹಜ್ಜ್ ಮಾಡಲು ಸಹ ಹೋಗಲು ಸಾಧ್ಯವಾಗಲಿಲ್ಲ. ಅವರು ವಸಿಯ್ಯತ್ ಮಾಡಿದರು. ಆಗಲೇ ಖುರೈಶಿನಿಂದ ಒಬ್ಬ ವ್ಯಕ್ತಿ ಅವರ ಬಳಿಗೆ ಬಂದರು. ಬಹಳ ಹೀನಾಯ ಸ್ಥಿತಿ ಉಂಟಾಗಿರುವ ಕಾರಣ ಯಾರನ್ನಾದರೂ ಖಲೀಫರನ್ನಾಗಿ ಮಾಡಿರಿ ಎಂದು ಅವನು ಹೇಳಿದನು. ಜನರು ಹೀಗೆ ಹೇಳುತ್ತಿದ್ದಾರೆಯೇ? ಎಂದು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಕೇಳಿದರು. ಹೌದೆಂದು ಅವನು ಹೇಳಿದನು. ಯಾರನ್ನು ಖಲೀಫರನ್ನಾಗಿ ಮಾಡಲು ಇಚ್ಛಿಸುತ್ತಿದ್ದಾರೆ? ಎಂದು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಕೇಳಿದರು. ಅವನು ಏನೂ ಹೇಳದೆ ಸುಮ್ಮಗೆ ನಿಂತ.ಅಷ್ಟರಲ್ಲೇ ಇನ್ನೊಬ್ಬ ವ್ಯಕ್ತಿ ಬಂದರು. ಅದು ಹಾರಿಸ್ ಎಂದು ತೋರುತ್ತದೆ ಎಂದು ವರದಿಗಾರ ಹೇಳುತ್ತಾರೆ. ಖಲೀಫರನ್ನು ನಿಶ್ಚಯಿಸಿರಿ ಎಂದು ಅವರು ಸಹ ಹೇಳಲು ತೊಡಗಿದರು. ಜನರು ಹೀಗೆ ಹೇಳುತ್ತಿದ್ದಾರೆಯೇ? ಎಂದು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಕೇಳಿದರು. ಹೌದೆಂದು ಅವರು ಸಹ ಹೇಳಿದರು. "ನನ್ನ ನಂತರ ಯಾರು ಖಲೀಫ ಆಗಬೇಕು" ಎಂದು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಕೇಳಿದರು. ಅವರು ಸಹ ಮೌನವಾಗಿದ್ದರು. ಬಹುಶಃ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಆಯ್ಕೆ ಮಾಡಲು ಹೇಳುತ್ತಿರಬಹುದು ಎಂದು ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಹೇಳಿದರು. ಹೌದೆಂದು ಅವರು ಹೇಳಿದರು. ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು ಹೇಳಿದರು: 'ಯಾರ ಕೈಯಲ್ಲಿ ನನ್ನ ಪ್ರಾಣವಿದೆಯೋ ಅವನ ಆಣೆ ಹಾಕಿ ಹೇಳುತ್ತೇನೆ, ಅವರು ಒಬ್ಬ ಉತ್ತಮ ವ್ಯಕ್ತಿಯಾಗಿರುವರು. ಎಂದರೆ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೂ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಅತ್ಯಂತ ಪ್ರಿಯರಾಗಿದ್ದರು.' (ಸಹೀಹ್ ಬುಖಾರಿ, ಕಿತಾಬ್ ಫಝಾಇಲ್ ಅಸ್ಹಾಬುನ್ನಬಿ(ಸ), ಹದೀಸ್–3717)

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಒಂದು ಬಾರಿ ಬದರ್ ಯುದ್ಧದಲ್ಲೂ ಭಾಗಿಯಾಗಿದ್ದ ಒಬ್ಬ ಅನ್ಸಾರಿ ಸಹಾಬಿಯೊಂದಿಗೆ ನೀರಿನ ಕಾಲುವೆ ಅಥವಾ ನಾಲೆಯ ವಿಷಯದಲ್ಲಿ ಭಿನ್ನಾಭಿಪ್ರಾಯ ಉಂಟಾಯಿತು. ಅವರಿಬ್ಬರೂ ಅದರಿಂದ ತಮ್ಮ ತಮ್ಮ ಕೃಷಿ ಭೂಮಿಗೆ ನೀರು ಹಾಯಿಸುತ್ತಿದ್ದರು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ತರ್ಕವನ್ನು ಕೊನೆಗೊಳಿಸಲು ಝುಬೇರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದರು: ಝುಬೇರ್, ನೀನು ನಿನ್ನ ಕೃಷಿ ಭೂಮಿಗೆ ನೀರೊದಗಿಸಿದ ನಂತರ ತನ್ನ ನೆರೆಕರೆಯವನಿಗೆ ಸಹ ನೀರನ್ನು ಬಿಟ್ಟುಕೊಡು. ಹಾಗಿದ್ದೂ ಅನ್ಸಾರಿಗೆ ಈ ತೀರ್ಮಾನ ಇಷ್ಟವಾಗಲಿಲ್ಲ. ಆ ಅನ್ಸಾರಿ ಹೇಳಿದ: ರಸೂಲುಲ್ಲಾಹ್, ಇವರು ನಿಮ್ಮ ಚಿಕ್ಕಮನ ಮಗನಾಗಿರುವ ಕಾರಣ ನೀವು ಹೀಗೆ ತೀರ್ಮಾನ ಮಾಡಿದ್ದೀರಿ ತಾನೇ? ಹೀಗೆ ಹೇಳಿದ್ದಾಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಅನುಗ್ರಹೀತ ಮುಖದ ಬಣ್ಣ ಬದಲಾಯಿತು. ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಝುಬೇರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದರು: ಇನ್ನು ನೀನು ಕೃಷಿ ಭೂಮಿಯ ದಿನ್ನೆಯ ತನಕ ನೀರು ತುಂಬುವ ವರೆಗೆ ನೀರನ್ನು ಬಿಟ್ಟುಕೊಡಬೇಡ. ಹೀಗೆ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಸಿಕ್ಕಬೇಕಾಗಿದ್ದ ಪೂರ್ತಿ ಹಕ್ಕನ್ನು ಅವರಿಗೆ ನೀಡಿದರು. ಮೊದಲು ಇಬ್ಬರಿಗೂ ಸಿಗಲಿಕ್ಕಾಗಿ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಲಹೆಯನ್ನಿತ್ತಿದ್ದರು. ಅದರಲ್ಲಿ ಇಬ್ಬರಿಗೂ ಸೌಲಭ್ಯವಿತ್ತು. ಆದರೆ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ತೀರ್ಮಾನದಲ್ಲಿ ಅನ್ಸಾರ್ ಸಹೋದರ ಅತೃಪ್ತಿ ತೋರಿಸಿದಾಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಸಿಗಬೇಕಿದ್ದ ಹಕ್ಕನ್ನು ಸಂಪೂರ್ಣವಾಗಿ ಕೊಟ್ಟು ಸರಿಯಾದ ತೀರ್ಮಾನ ನೀಡಿದರು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: **ಫಲಾ ವ ರಬ್ಬಿಕ ಲಾ ಯುಮಿನೂನ ಹತ್ತಾ ಯುಹಕ್ಕಿಮೂಕ ಫೀಮಾ ಶಜರ್ ಬೈನಹುಮ್ ಸುಮ್ಮ ಲಾ ಯಜಿದು**

**ಫೀ ಅನ್ಫುಸಿಹಿಮ್ ಹರಜಿಮ್ ಮಾ ಖಝೈತ ವಯುಸಲ್ಲಿಮು ತಸ್‌ಲೀಮ** (ಅನ್ನಿಸಾ:66) ಎಂದರೆ, ಆದರೆ ಹಾಗಲ್ಲ, ನಿನ್ನ ಪ್ರಭುವಿನಾಣೆ, ಅವರ ಮಧ್ಯೆ ಭಿನ್ನಾಭಿಪ್ರಾಯವುಳ್ಳ ವಿಚಾರದಲ್ಲಿ ಅವರು ನಿನ್ನನ್ನು ತೀರ್ಪುಗಾರನನ್ನಾಗಿ ಸ್ವೀಕರಿಸಿ, ನೀನು ತೀರ್ಪು ನೀಡಿದ ವಿಚಾರದ ಕುರಿತು ಅವರ ಹೃದಯಗಳಲ್ಲಿ ಯಾವ ಅಸಮಾಧಾನವೂ ಉಂಟಾಗದೆ ಅವರು ಪೂರ್ಣವಾಗಿ ವಿಧೇಯತೆ ತೋರಿಸುವ ವರೆಗೆ ಅವರು (ಯಥಾರ್ಥ) ವಿಶ್ವಾಸಿಗಳಾಗಲಿಕ್ಕಿಲ್ಲ. (ಅನ್ನಿಸಾ) ಎಂಬ ಆಯತ್ ಇದೇ ಘಟನೆಗೆ ಸಂಬಂಧಿಸಿ ಅವತೀರ್ಣವಾಗಿತ್ತು ಎಂದು ನಿಶ್ಚಯವಾಗಿಯೂ ಭಾವಿಸುತ್ತೇನೆ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–1, ಪುಟ–453, ಹದೀಸ್–1419, ಆಲಿಮುಲ್ ಕುತುಬ್ ಬೈರೂತ್ 1998)

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ವರದಿ ಮಾಡುತ್ತಾರೆ: **'ಸುಮ್ಮ ಇನ್ನಕುಮ್ ಯೌಮಲ್ ಖಿಯಾಮತಿ ಇಂದ ರಬ್ಬಿಕುಮ್ ತಖ್ತಸಿಮೂನ್'** ಎಂದರೆ, ನೀವು ಖಿಯಾಮತ್ ದಿನದಂದು ಅಲ್ಲಾಹನ ಸನ್ನಿಧಿಯಲ್ಲಿ ಪರಸ್ಪರ ವಾದಿಸುವಿರಿ ಎಂಬ ಆಯತ್ ಅವತೀರ್ಣವಾದಾಗ ನಾನು ಕೇಳಿದೆ: ಹೇ ರಸೂಲುಲ್ಲಾಹ್ ಇದರಲ್ಲಿ ನಮ್ಮ ಲೌಕಿಕವಾದ ಜಗಳದ ಬಗ್ಗೆ ಸೂಚಿಸಲಾಗಿದೆಯೋ? ಆಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೌದು ಎಂದು ಹೇಳಿದರು. ಅನಂತರ **ಸುಮ್ಮ ಲತುಸ್‌ಅಲುನ್ನ ಯೌಮಯಿಝಿನ್ ಅನಿನ್ನಈಮ್** (ಅತ್ತಕಾಸುರ್–9) ಮತ್ತೆ, ಖಂಡಿತವಾಗಿಯೂಅಂದು ನಿಮ್ಮೊಡನೆ (ಇಹಲೋಕದ) ಸುಖಗಳ ಬಗ್ಗೆ ಪ್ರಶ್ನಿಸಲಾಗುವುದು. ಎಂದರೆ 'ಆ ದಿನ ನಿಮಗೆ ಸಿಕ್ಕಿರುವ ಅನುಗ್ರಹಗಳ ಬಗ್ಗೆ ಪ್ರಶ್ನಿಸಲಾಗುವುದು' ಎಂಬ ಆಯತ್ ಅವತೀರ್ಣವಾದಾಗ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಕೇಳಿದರು: ಯಾ ರಸೂಲುಲ್ಲಾಹ್, ನಮ್ಮ ಬಳಿ ಖರ್ಜೂರ ಮತ್ತು ನೀರು ಮಾತ್ರವಿರುವಾಗ ನಮ್ಮೊಡನೆ ಯಾವ ಅನುಗ್ರಹದ ಬಗ್ಗೆ ಕೇಳಲಾಗುವುದು? ಆಗ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದರು: ಕಿವಿಗೊಟ್ಟು ಕೇಳಿರಿ, ಈ ಅನುಗ್ರಹದ ಕಾಲ ಸಹ ಸಮೀಪದಲ್ಲೇ ಬರುವುದು.

(ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–1, ಪುಟ–449, ಮಸ್ನದ್ ಝುಬೈರ್ ಬಿನುಲ್ ಉಲೂಮ್, ಹದೀಸ್–1405, ಆಲಿಮುಲ್ ಕುತುಬ್ ಬೈರೂತ್) ಎಂದರೆ ಈಗ ಬಡತನವಿದ್ದರೂ ಸಂಪನ್ನತೆಯ ಕಾಲ ಸಹ ಬೇಗನೇ ಬರುವುದು ಇನ್‌ಶಾ ಅಲ್ಲಾಹ್.

ಹಬ್ಸ್ ಬಿನ್ ಖಾಲಿದ್ ಹೇಳುತ್ತಾರೆ: ನನಗೆ ಈ ಹದೀಸನ್ನು ಮೌಸಲ್ ಎಂಬ ಸ್ಥಳದಿಂದ ನಮ್ಮ ಬಳಿ ಬರುತ್ತಿದ್ದ ಒಬ್ಬ ಹಿರಿಯರು ಹೇಳಿದ್ದರು. ಮೌಸಲ್ ಎಂಬುದು ಸಿರಿಯಾದ ಪ್ರಸಿದ್ಧ ಪಟ್ಟಣವಾಗಿದೆ. ಅದರ ಜನಸಂಖ್ಯೆದ ಆಧಿಕ್ಯ ಮತ್ತು ವಿಸ್ತೀರ್ಣವಾದ ಭೂಪ್ರದೇಶದ ಕಾರಣ ಆ ಕಾಲದ ಇಸ್ಲಾಮಿನ ದೇಶಗಳಲ್ಲಿ ಬಹಳ ಪ್ರಾಮುಖ್ಯ ಪಡೆದಿತ್ತು. ಇತರ ಎಲ್ಲ ಪಟ್ಟಣಗಳಿಂದ ಅಲ್ಲಿಗೆ ಜನರು ಹೋಗುತ್ತಿದ್ದರು. ಇದು ನೇನೆವದ ಸಮೀಪ ದಜ್‌ಲ ನದಿಯ ತೀರದಲ್ಲಿರುವ ಬಗ್ದಾದ್‌ನಂದ 222 ಮೈಲು ದೂರದಲ್ಲಿ ಇದೆ...? ಇದಾಗಿದೆ ಸ್ಥಳಗಳ ನಿಘಂಟುವಿನಲ್ಲಿ ಇದರ ಬಗ್ಗೆ ನೀಡಲಾಗಿರುವ ಮಾಹಿತಿ. ಹೇಗಿದ್ದರೂ ಹಬ್ಸ್ ಬಿನ್ ಖ಼ಾಲಿದ್ ಹೇಳುತ್ತಾರೆ. ಮೌಸಲ್ ಎಂಬ ಸ್ಥಳದಿಂದ ಆ ಹಿರಿಯರು ನಮ್ಮ ಬಳಿ ಬರುತ್ತಿದ್ದರು. ಆ ಹಿರಿಯರು ಹೇಳುತ್ತಿದ್ದರು: ನಾನು ಹಝ್ರತ್ ಝುಬೇರ್ ಬಿನ್ ಅವಾಮ್‌ರೊಂದಿಗೆ ಕೆಲವು ಯಾತ್ರೆಗಳನ್ನು ಮಾಡಿದ್ದೇನೆ. ಒಂದು ಬಾರಿ ಒಂದು ಮರುಭೂಮಿಯಲ್ಲಿ ಅವರು ಸ್ನಾನ ಮಾಡಲು ಉದ್ದೇಶಿಸಿದರು. ಅವರು ನನ್ನೊಡನೆ ಅವರಿಗೆ ಮರೆಯಾಗಿ ನಿಲ್ಲಲ್ಲು ಹೇಳಿದರು. ನಾನು ಅವರಿಗಾಗಿ ಒಂದು ಬಟ್ಟೆ ಹಿಡಿದು ಮರೆಯಾಗಿ ನಿಂತೆ. ಅವರು ಸ್ನಾನ ಮಾಡಲು ಶುರು ಮಾಡಿದರು. ಅಚಾನಕ್ಕಾಗಿ ನನ್ನ ದೃಷ್ಟಿ ಅವರ ಶರೀರದ ಮೇಲೆ ಬಿತ್ತು. ಅವರ ಪೂರ್ತಿ ಶರೀರದಲ್ಲಿ ಖಡ್ಗಗಳಿಂದ ಆದ ಗಾಯಗಳ ಗುರುತುಗಳಿದ್ದುವು. ನಾನು ಅವರೊಡನೆ ಹೇಳಿದೆ, ಅಲ್ಲಾಹನಾಣೆ ನಾನು ಇಂದಿನ ವರೆಗೆ ಯಾರ ಶರೀರದಲ್ಲೂ ಕಾಣದಷ್ಟು ಗಾಯಗಳ ಗುರುತುಗಳನ್ನು ನಿಮ್ಮ ಶರೀರದಲ್ಲಿ ಕಂಡೆನು. ಅವರು ಕೇಳಿದರು: ನೀನು ನನ್ನ ಶರೀರದಲ್ಲಿರುವ ಗಾಯಗಳ ಗುರುತುಗಳನ್ನು ನಿಜವಾಗಿಯೂ ನೋಡಿದ್ದೀಯಾ? ಅನಂತರ ಹೇಳಿದರು: ಅಲ್ಲಾಹನಾಣೆ ಈ ಎಲ್ಲ ಗಾಯಗಳು ನನಗೆ ಅಲ್ಲಾಹನ ಮಾರ್ಗದಲ್ಲಿ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಂದಿಗೆ ಸೇರಿಕೊಂಡು ಯುದ್ಧ ಮಾಡುವುದರಿಂದ ಆಗಿದ್ದುವು. (ಮುಸ್ತದ್‌ರಿಕ್ ಅಲಸ್ಸಹೀಹೈನ್ ಲಿಲ್‌ಹಾಕಿಮ್, ಸಂಪುಟ–2, ಪುಟ–406, ಕಿತಾಬುಲ್ ಮಾರಿಫತಿಸ್ಸಹಾಬ, ಹದೀಸ್–5550, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2002) (ಫರ್‌ಹಂಗ್ ಸೀರತ್, ಸೈಯದ್ ಫಝ್ಲುರ್ರಹ್ಮಾನ್, ಪುಟ–288)

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹು, ಹಝ್ರತ್ ಮಿಖ್‌ದಾದ್ ರಝಿಯಲ್ಲಾಹು ಅನ್‌ಹು, ಹಝ್ರತ್ ಅಬ್ದುಲ್ಲಾಹ್ ಬಿನ್ ಮಸ್‌ಊದ್ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್ ರಝಿಯಲ್ಲಾಹು ಅನ್‌ಹು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ವಸಿಯ್ಯತ್ ಮಾಡಿದ್ದರು. ಎಂದರೆ, ಇವರೆಲ್ಲರ ಸಂಪತ್ತನ್ನು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಸಂರಕ್ಷಿಸುತ್ತಿದ್ದರು ಮತ್ತು ಆದರೆ ತನ್ನ ಸ್ವಂತ ಸಂಪತ್ತಿನಿಂದ ಅವರ ಮಕ್ಕಳ ಮೇಲೆ ಖರ್ಚು ಮಾಡುತ್ತಿದ್ದರು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಬಳಿ ಸಂಪತ್ತು ಇದ್ದ ಕಾರಣ, ಮೇಲೆ ಪ್ರಸ್ತಾಪಿಸಲಾದ ಸಹಾಬಿಯರ ಮಕ್ಕಳ ಖರ್ಚನ್ನು ಅವರ ಸಂಪತ್ತುಗಳಿಂದ ಖರ್ಚು ಮಾಡದೆ, ಝುಬೇರ್ ರಝಿಯಲ್ಲಾಹು ಅನ್‌ಹು ಸ್ವತಃ ವಹಿಸುತ್ತಿದ್ದರು. ಅವರ ಸಂಪತ್ತು ಅವರಿಗೆ ಉಪಯೋಗಕ್ಕೆ ಬರಲಿ ಎಂದು ಯೋಚಿಸಿ ಅದರಿಂದ ತೆಗೆಯುತ್ತಿರಲಿಲ್ಲ. ಯಾವುದೇ ಲಾಲಸೆ ಅವರ ಸಂಪತ್ತುಗಳ ಮೇಲೆ ಇರಲಿಲ್ಲ.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಒಂದು ಸಾವಿರ ಸೇವಕರಿದ್ದರು ಎಂದು ವರದಿಯಾಗಿದೆ. ಆ ಸೇವಕರು ಕೃಷಿ ಭೂಮಿಯಲ್ಲಿ ಕೆಲಸ ಮಾಡಿ ಅದರ ಬೆಳೆಯನ್ನು ತರುತ್ತಿದ್ದರು. ಆದರೆ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಅವುಗಳನ್ನು ಮನೆಗೆ ತರದೆ, ಪೂರ್ತಿಯಾಗಿ ದಾನ ಮಾಡುತ್ತಿದ್ದರು.

ಮುತೀ ಬಿನ್ ಅಸ್‌ವದ್ ವರದಿ ಮಾಡುತ್ತಾರೆ: ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು ಹೇಳುತ್ತಿದ್ದರು. ಝುಬೇರ್ ರಝಿಯಲ್ಲಾಹು ಅನ್‌ಹು ದೀನನ ಸ್ತಂಭಗಳಲ್ಲಿ ಒಂದು ಸ್ತಂಭವಾಗಿರುವರು. (ಅಲ್‌ಅಸಾಬ ಫೀ ತಮೀಝಿಸ್ಸಹಾಬ. ಸಂಪುಟ–2, ಪುಟ–460, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1995)

ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ವರದಿ ಮಾಡುತ್ತಾರೆ: ಹಝ್ರತ್ ಝುಬೇರ್, ಎಂದರೆ ನನ್ನ ತಂದೆ ಜಮಲ್ ಯುದ್ಧಕ್ಕಾಗಿ ತಯಾರಾಗಿ ನಿಂತಾಗ, ಅವರು ನನ್ನನ್ನು ಸಮೀಪಕ್ಕೆ ಕರೆದರು. ನಾನು ಅವರ ಬಳಿ ನಂತೆ. ಅವರು ಹೇಳಿದರು: ಹೇ ನನ್ನ ಪ್ರಿಯ ಮಗನೇ, ಇಂದು ದೌರ್ಜನ್ಯಗಾರರ ಅಥವಾ ದೌರ್ಜನ್ಯ ಪೀಡಿತರ ಕೊಲೆ ನಡೆಯುವುದು. ಇಂದು ನಾನು ದೌರ್ಜನ್ಯ ಪೀಡಿತನ ಸ್ಥಿತಿಯಲ್ಲಿ ಶಹೀದ್ ಆಗುವೆನು ಎಂದು ನನಗೆ ಅನಿಸುತ್ತಿದೆ. ನನಗೆ ಅತಿ ಹೆಚ್ಚಿನ ಚಿಂತೆ ನನ್ನ ಸಾಲಗಳ ಬಗ್ಗೆಯಾಗಿದೆ. ಸಾಲಗಳನ್ನು ಸಂದಾಯ ಮಾಡಿದ ನಂತರ ನನ್ನ ಸಂಪತ್ತಿನಿಂದ ಏನಾದರೂ ಬಾಕಿಯುಳಿಯುವುದೋ ಎಂದು ನೀನು ಭಾವಿಸುತ್ತಿಯೋ? ಅನಂತರ ಹೇಳಿದರು, ಹೇ ನನ್ನ ಮಗನೇ, ನನ್ನ ಸೊತ್ತನ್ನು ಮಾರಾಟ ಮಾಡಿ ನನ್ನ ಸಾಲಗಳನ್ನು ಸಂದಾಯ ಮಾಡು. ಮೂರನೇ ಒಂದು ಭಾಗವನ್ನು ನಾನು ವಸಿಯ್ಯತ್ ಮಾಡುತ್ತೇನೆ. ಸಾಲಗಳನ್ನು ಸಂದಾಯ ಮಾಡಿದ ನಂತರ ಏನಾದರೂ ಬಾಕಿಯಾದರೆ, ಅದರಿಂದ ಮೂರನೇ ಒಂದು ಭಾಗ ನಿನ್ನ ಮಕ್ಕಳಿಗೂ ನೀಡು. ಎಂದರೆ, ಅದರಿಂದ ತನ್ನ ಮಗನ ಮಕ್ಕಳಿಗೂ ಬೇರೆ ಭಾಗವನ್ನು ನೀಡಲು ಹೇಳಿದರು. ಹಿಶಾಮ್ ವರದಿ ಮಾಡುತ್ತಾರೆ, ಅಬ್ದುಲ್ಲಾಹ್ ಬಿನ್ ಝುಬೇರಿನ ಮಕ್ಕಳು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಕಿರಿಯ ಮಕ್ಕಳಾದ ಖುಬೈಬ್ ಮತ್ತು ಅಬಾದಿಗೆ ಸಮ ವಯಸ್ಕರಾಗಿದ್ದರು. ಎಂದರೆ, ಅಬ್ದುಲ್ಲಾಹ್‌ರ ಮಕ್ಕಳು ಅವರ ತಂದೆಯರಾದ ಹಝ್ರತ್ ಝುಬೇರರ ಕಿರಿಯ ಎರಡು ಮಕ್ಕಳ ಸಮ ಪ್ರಾಯದವರಾಗಿದ್ದರು. ಸ್ವಂತ ಸಹೋದರರ ಪ್ರಾಯದ ಮಕ್ಕಳು ಸಹ ಅಬ್ದುಲ್ಲಾಹ್‌ರಿಗೆ ಇದ್ದುವು. ಆ ಕಾಲದಲ್ಲಿ ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್‌ರಿಗೆ ಒಂಬತ್ತು ಹೆಣ್ಮಕ್ಕಳಿದ್ದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ವರದಿ ಮಾಡುತ್ತಾರೆ: ನನ್ನ ತಂದೆಯರಾದ ಝುಬೇರ್ ರಝಿಯಲ್ಲಾಹು ಅವರ ಸಾಲದ ಬಗ್ಗೆ ವಸಿಯ್ಯತ್ ಮಾಡುತ್ತಾ ಹೀಗೆ ಹೇಳಿದರು: ನನ್ನ ಸಾಲಗಳನ್ನು ಸಂದಾಯ ಮಾಡಲು ಅಸಾಧ್ಯವಾಗುವ ಸ್ಥಿತಿ ಬಂದರೆ, ನನ್ನ ಮೌಲಾನಂದ ಎಂದರೆ, ಯಜಮಾನನಂದ ಸಹಾಯ ಪಡೆ, ಮೌಲಾ ಎಂಬುದರಿಂದ ನನ್ನ ತಂದೆಯವರು ಯಾರನ್ನು ಉದ್ದೇಶಿಸಿದ್ದರು ಎಂದು ಗೊತ್ತಾಗದ ಕಾರಣ ನಾನು ಮೌಲಾ ಯಾರೆಂದು ಕೇಳಿದೆ. ಆಗ ಹಝ್ರತ್ ಝುಬೇರ್ ಹೇಳಿದರು: ಅಲ್ಲಾಹ್. ಅನಂತರ ಯಾವಾಗಲೆಲ್ಲ ಸಾಲ ಸಂದಾಯ ಮಾಡಲು ಸಾಧ್ಯವಾಗದೆ ಸಂಕಷ್ಟದಲ್ಲಿ ಸಿಲುಕುವ ಸ್ಥಿತಿ ಬರುವಾಗಲೆಲ್ಲ ನಾನು ಹೀಗೆ ಹೇಳುತ್ತಿದ್ದೆ, ಹೇ ಝುಬೇರಿನ ಮೌಲಾ ಸಾಲದ ಸಂದಾಯವನ್ನು ಸುಲಭಗೊಳಿಸು. ಆಗ ಅವನು ಅದನ್ನು ಸಂದಾಯ ಮಾಡಿಸುತ್ತಿದ್ದನು. ಎಂದರೆ, ಸಾಲ ಸಂದಾಯ ಮಾಡಲಿಕ್ಕಾಗಿ ಏನಾದರೂ ಏರ್ಪಾಡು ಅಲ್ಲಾಹನು ಮಾಡಿಸುತ್ತಿದ್ದನು. ಅವರಿಗೆ ಸೊತ್ತಿತ್ತು ಅದರಿಂದ ಸಂದಾಯವಾಗುತ್ತಿತ್ತು.

ಹಝ್ರತ್ ಝುಬೇರ್ ಶಹೀದ್ ಆಗುವಾಗ ಅವರು ಯಾವುದೇ ದೀನಾರ್ ಅಥವಾ ದಿರ್‌ಹಮ್ ಬಿಟ್ಟು ಹೋಗಿರಲಿಲ್ಲ. ಕೆಲವು ಭೂಪ್ರದೇಶಗಳಿದ್ದುವು. ಅದರಲ್ಲಿ ಗಾಬ ಎಂಬ ಸ್ಥಳವೂ ಇತ್ತು. ಮದೀನದಲ್ಲಿ ಹನ್ನೊಂದು ಮನೆಗಳಿದ್ದುವು, ಎರಡು ಮನೆಗಳು ಬಸ್‌ರದಲ್ಲಿ ಇದ್ದುವು, ಒಂದು ಮನೆ ಕೂಫದಲ್ಲಿತ್ತು ಮತ್ತು ಒಂದು ಮನೆ ಈಜಿಪ್ಟ್‌ನಲ್ಲಿತ್ತು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಸಾಲಗಾರರಾಗಲು ಕಾರಣವೇನೆಂದರೆ, ಜನರು ಅವರ ಬಳಿ ಅಮಾನತ್ತಾಗಿ, ಎಂದರೆ, ತಮ್ಮ ಹಣವನ್ನು ಸುರಕ್ಷಿತವಾಗಿರಿಸಲು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ

ಒಪ್ಪಿಸುತ್ತಿದ್ದರು. ಆದರೆ ಇದು ಸಾಲವಾಗಿದೆ ಎಂದು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳುತ್ತಿದ್ದರು. ಏಕೆಂದರೆ ಅದು ನಷ್ಟವಾಗುವ ಸಾಧ್ಯತೆಯಿರುವ ಕಾರಣ, ಅದನ್ನು ಅವರು ಅಮಾನತ್ತಾಗಿ ಇರಿಸುತ್ತಿರಲಿಲ್ಲ, ಬದಲಿಗೆ ಸಾಲವೆಂಬ ರೀತಿಯಲ್ಲಿ ಅದನ್ನು ಅವರಿಂದ ಪಡೆಯುತ್ತಿದ್ದರು. ಅದರಿಂದ ಖರ್ಚು ಸಹ ಮಾಡುತ್ತಿದ್ದರು. ಆ ಹಣವನ್ನು ಸುರಕ್ಷಿತವಾಗಿಸಲು ಅವರು ಹೀಗೆ ಮಾಡುತ್ತಿದ್ದರು. ಆದ್ದರಿಂದ ಅದನ್ನು ಮರಳಿ ಸಂದಾಯ ಮಾಡಬೇಕಾದ ಸಾಲದ ರೂಪದಲ್ಲಿ ಪಡೆಯುತ್ತಿದ್ದರು. ಹೇಗಿದ್ದರೂ ಹಝ್ರತ್ ಝುಬೇರ್ ಎಂದೂ ಸಿರಿವಂತರಾಗಿರಲಿಲ್ಲ, ಮಾತ್ರವಲ್ಲ ಅವರು ಧನ ವಸೂಲು ಮಾಡುವ, ಕಂದಾಯ ವಸೂಲು ಮಾಡುವ ಅಥವಾ ಬೇರೆ ಯಾವುದೇ ಧನಪರವಾದ ಸೇವೆಯನ್ನು ಮಾಡಿರಲಿಲ್ಲ. ಬದಲಿಗೆ ಅವರು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರೊಡನೆ ಜಿಹಾದಿನಲ್ಲಿ ಖಂಡಿತ ಭಾಗವಹಿಸುತ್ತಿದ್ದರು. ಆದರೆ ಹಣವನ್ನು ನಕದು ರೂಪದಲ್ಲಿ ಕೂಡಿಸುವ ಶ್ರೀಮಂತನಂತೆ ಅವರು ಎಂದೂ ಆಗಿರಲಿಲ್ಲ.

ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಹೇಳುತ್ತಾರೆ: ನಾನು ಅವರ ಸಾಲಗಳ ಲೆಕ್ಕ ಹಾಕಿದಾಗ ಅವು ಒಟ್ಟು 22 ಲಕ್ಷಗಳಾಗಿವೆ ಎಂದು ತಿಳಿದುಬಂತು. ಹಝ್ರತ್ ಹಕೀಮ್ ಬಿನ್ ಹಝ್ಝಾಮ್ ಅಬ್ದುಲ್ಲಾಹ್ ಬಿನ್ ಝುಬೇರ್‌ರನ್ನು ಭೇಟಿಯಾಗಿ ಹೀಗೆ ಕೇಳಿದರು. ಹೇ ನನ್ನ ಸಹೋದರ ಪುತ್ರ, ನನ್ನ ಸಹೋದರನಿಗೆ ಎಷ್ಟು ಸಾಲವಿದೆ? ಅಬ್ದುಲ್ಲಾಹ್ ಬಿನ್ ಝುಬೇರ್ ಒಂದು ಲಕ್ಷವೆಂದು ಹೇಳಿದರು. ಹಝ್ರತ್ ಹಕೀಂ ಬಿನ್ ಹಝ್ಝಾಮ್ ಹೇಳಿದರು. ಅಲ್ಲಾಹನಾಣೆ, ಈ ಸಾಲವನ್ನು ತೀರಿಸುವಷ್ಟು ಸಂಪತ್ತು ನನ್ನ ಬಳಿಯಿದೆ ಎಂದು ನನಗೆ ಅನಿಸುವುದಿಲ್ಲ. ಎಂದರೆ, ಬಾಹ್ಯವಾಗಿ ಅಷ್ಟೇನು ಇರುವುದಾಗಿ ಕಾಣುತ್ತಿರಲಿಲ್ಲ. ಅನಂತರ ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಅವರೊಂದಿಗೆ ಕೇಳಿದರು: ಅವರ ಒಟ್ಟು ಸಾಲ 22 ಲಕ್ಷಗಳು ಎಂದು ನಾನು ಹೇಳಿದರೆ, ನೀವು ಏನು ಹೇಳುತ್ತೀರಿ? ಆಗ ಅವರು ಹೇಳಿದರು. ಅವರ ಇಷ್ಟೆಲ್ಲ ಸಾಲಗಳನ್ನು ನಿನ್ನಿಂದ ಸಂದಾಯ ಮಾಡಲು ಸಾಧ್ಯವೆಂದು ನನಗೆ ಅನಿಸುತ್ತಿಲ್ಲ. ನಿನಗೆ ಅದನ್ನು ಸಂದಾಯ ಮಾಡಲು ಕಷ್ಟವಾದರೆ ಅಥವಾ ಸಾಧ್ಯವಾಗದಿದ್ದರೆ ನನ್ನಿಂದ ಸಹಾಯ ಪಡೆ. ಸಂದಾಯ ಮಾಡಲು ಆಗದಿದ್ದರೆ, ನನ್ನೊಡನೆ ಹೇಳು. ನಾನು ಅವುಗಳನ್ನು ಸಂದಾಯ ಮಾಡಲು ಹಾಜರಿದ್ದೇನೆ. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಗಾಬವನ್ನು ಒಂದು ಲಕ್ಷ ಎಪ್ಪತ್ತು ಸಾವಿರಕ್ಕೆ ಖರೀದಿ ಮಾಡಿದ್ದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಅದನ್ನು 16 ಲಕ್ಷಕ್ಕೆ ಮಾರಾಟ ಮಾಡಿದರು. ಅನಂತರ ನಿಂತುಕೊಂಡು ಹೇಳಿದರು: ಯಾರಿಗಾದರೂ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಂದ ಏನಾದರೂ ಲಭಿಸಲಿಕ್ಕಿದ್ದರೆ ಅವರು ಗ್ಹಾಬಾಗೆ ಬನ್ನಿರಿ. ಎಂದರೆ ಗ್ಹಾಬದಲ್ಲಿರುವ ಆ ಭೂಪ್ರದೇಶವನ್ನು ಮಾರಾಟಬೇಕಾಗಿತ್ತು, ಆದ್ದರಿಂದ ಝುಬೇರ್ ರಝಿಯಲ್ಲಾಹು ಅನ್‌ಹು ಯಾರಿಗೆಲ್ಲ ಸಾಲ ತೀರಿಸಬೇಕಿತ್ತೋ ಅವರನ್ನೆಲ್ಲ ಅಲ್ಲಿಗೆ ಕರೆದರು. ಹಝ್ರತ್ ಅಬ್ದುಲ್ಲಾಹ್ ಬಿನ್ ಜಾಫರಿಗೆ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ನಾಲ್ಕು ಲಕ್ಷಗಳು ಕೊಡಬೇಕಾಗಿತ್ತು. ಅವರು ಹೇಳಿದರು: ನೀವು ಇಚ್ಚಿಸುವುದಾದರೆ, ನಾನು ಅದನ್ನು ಬಿಟ್ಟು ಬಿಡುತ್ತೇನೆ. ಇಲ್ಲದಿದ್ದರೆ ಕೊನೆಗೆ ಸಂದಾಯ ಮಾಡಲು ಇಚ್ಛಿಸುವ ಸಾಲಗಳಲ್ಲಿ ಅದನ್ನು ಇರಿಸಿದರೆ ಆಯಿತು. ಅವಸರಪಡಬೇಕಾಗಿಲ್ಲ. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಹೇಳಿದರು: ಅದು ಬೇಡ. ಆಗ ಅಬ್ದುಲ್ಲಾಹ್ ಬಿನ್ ಜಾಫರ್ ಹೇಳಿದರು: ಹಾಗಾದರೆ ನನಗೆ ಒಂದು ತುಂಡು ಭೂಪ್ರದೇಶವನ್ನು ಕೊಡು. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳಿದರು: ಇಲ್ಲಿಂದ ಅಲ್ಲಿಯ ವರೆಗಿನ ಭೂಮಿ ನಿನ್ನದು ಎಂದು ಹೇಳಿ ಅದನ್ನು ಅಬ್ದುಲ್ಲಾಹ್ ಬಿನ್ ಜಾಫರರ ಸಾಲ ಸಂದಾಯ ಮಾಡಲು ಬೇಕಾಗಿದ್ದಷ್ಟು ಮಾರಾಟ ಮಾಡಿದರು. ಹೀಗೆ ಒಟ್ಟು ನಾಲ್ಕುವರೆ ಲಕ್ಷಗಳ ಸಾಲ ಕೊಡಲು ಬಾಕಿಯಿತ್ತು. ಹಝ್ರತ್ ಮುಆವಿಯಾರ ಬಳಿಗೆ ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಹೋದರು. ಇದು ಆ ಕಾಲದ ಘಟನೆಯಾಗಿತ್ತು. ಅಲ್ಲಿ ಅಮ್ರ್ ಬಿನ್ ಉಸ್ಮಾನ್, ಮುಂಝಿರ್ ಬಿನ್ ಝುಬೇರ್ ಮತ್ತು ಇಬ್ನು ಝಮ್‌ಅ ಸಹ ಇದ್ದರು. ಗಾಬದಲ್ಲಿರುವ ಪ್ರದೇಶಕ್ಕೆ ಎಷ್ಟು ಬೆಲೆಯನ್ನು ನಿಶ್ಚಯಿಸಲಾಗಿದೆ ಎಂದು ಹಝ್ರತ್ ಮುಆವಿಯ ಕೇಳಿದರು.ಪ್ರತಿಯೊಂದು ಭಾಗಕ್ಕೆ ಒಂದು ಲಕ್ಷವೆಂದು ಹಝ್ರತ್ ಇಬ್ನು ಝುಬೇರ್ ಹೇಳಿದರು. ಎಷ್ಟು ಭಾಗಗಳು ಬಾಕಿಯಿದೆ ಎಂದು ಹಝ್ರತ್ ಮುಆವಿಯಾ ಕೇಳಿದರು. ನಾಲ್ಕುವರೆ ಎಂದು ಇಬ್ನು ಝುಬೇರ್ ಹೇಳಿದರು.ಒಂದು ಭಾಗ ಒಂದು ಲಕ್ಷಕ್ಕೆ ನಾನು ಖರೀದಿ ಮಾಡುವೆನು ಎಂದು ಮುಂಝಿರ್ ಬಿನ್ ಝುಬೇರ್ ಹೇಳಿದರು. ಒಂದು ಭಾಗ ಒಂದು ಲಕ್ಷಕ್ಕೆ ನಾನು ತೆಗೆದೆ ಎಂದು ಅಮ್ರ್ ಬಿನ್ ಉಸ್ಮಾನ್ ಹೇಳಿದರು. ಒಂದು ಭಾಗವನ್ನು ಒಂದು ಲಕ್ಷಕ್ಕೆ ನಾನು ತೆಗೆಯುವೆನು ಎಂದು ಇಬ್ನು ಝಮ್‌ಅ ಹೇಳಿದರು. ಈಗೆಷ್ಟು ಬಾಕಿಯಿದೆ ಎಂದು ಹಝ್ರತ್ ಮುಆವಿಯಾ ಕೇಳಿದರು. ಒಂದುವರೆ ಭಾಗವೆಂದು ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಹೇಳಿದರು. ಆ ಭಾಗವನ್ನು ಒಂದುವರೆ ಲಕ್ಷಕ್ಕೆ ನಾನು ಖರೀದಿ ಮಾಡುವೆನು ಎಂದು ಹಝ್ರತ್ ಮುಆವಿಯಾ ಹೇಳಿದರು. ಎಂದರೆ ಗ್ಹಾಬದಲ್ಲಿ ಬಾಕಿಯಿದ್ದ ಒಂದುವರೆ ಭಾಗ ಭೂಪ್ರದೇಶವನ್ನು ಸಹ ಅವರು ಮಾರಾಟ ಮಾಡಿದರು. ಅಬ್ದುಲ್ಲಾಹ್ ಬಿನ್ ಜಾಫರ್ ತನ್ನ ಭಾಗಗಳನ್ನು ಹಝ್ರತ್ ಮುಆವಿಯಾಗೆ ಆರು ಲಕ್ಷಕ್ಕೆ ಮಾರಾಟ ಮಾಡಿದರು. ಹೇಗಿದ್ದರೂ ಅಲ್ಲಾಹನು ಸಂದಾಯ ಮಾಡಿಸುವನು ಎಂದು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳಿದ ಹಾಗೆಯೇ ಅಲ್ಲಾಹನು ಆ ಭೂಪ್ರದೇಶಗಳನ್ನು ಸುಲಭವಾಗಿ ಮಾರಾಟ ಮಾಡಿಸುವ ಏರ್ಪಾಡನ್ನು ಮಾಡುತ್ತಿದ್ದನು. ಈ ರೀತಿಯಲ್ಲಿ ಅವರು ತನ್ನ ಸ್ವಲ್ಪ ಸೊತ್ತನ್ನು ಮಾರಾಟ ಮಾಡಿ ಸಾಲ ಸಂದಾಯ ಮಾಡುತ್ತಾ ಹೋದರು.

ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಅವರ ತಂದೆಯಾದ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಎಲ್ಲ ಸಾಲಗಳನ್ನು ಸಂದಾಯ ಮಾಡಿದಾಗ, ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಮಕ್ಕಳು ಅವರ ವಾರಸು ಹಕ್ಕನ್ನು ವಿಭಜಿಸಿ ಕೊಡಲು ಹೇಳಿದರು. ಆಗ ಅಬ್ದುಲ್ಲಾಹ್ ಬಿನ್ ಝುಬೇರ್ ಹೇಳಿದರು: ಇಲ್ಲ, ಅಲ್ಲಾಹನಾಣೆ, ನಾಲ್ಕು ವರ್ಷಗಳ ಕಾಲ ಹಜ್ಜ್ ಸಮಯಗಳಲ್ಲಿ ಘೋಷಿಸುವ ತನಕ ನಾನು ಅದನ್ನು ವಿತರಣೆ ಮಾಡುವುದಿಲ್ಲ. ಎಂದರೆ, ಝುಬೇರ್ ರಝಿಯಲ್ಲಾಹು ಅನ್‌ಹು ಯಾರಿಗೆ ಸಾಲ ಸಂದಾಯ ಮಾಡಲು ಬಾಕಿಯಿದೆಯೋ ಅವರು ನಮ್ಮ ಬಳಿ ಬನ್ನರಿ, ಅವರಿಗೆ ಅದನ್ನು ಕೊಡಲಾಗುವುದು ಎಂದು ನಾಲ್ಕು ವರ್ಷಗಳ ಕಾಲ ಘೋಷಿಸುವ ವರೆಗೆ ಸೊತ್ತನ್ನು ವಿತರಣೆ ಮಾಡುವುದಿಲ್ಲ ಎಂದು ಅವರು ಹೇಳಿದರು. ಹೀಗೆ ನಾಲ್ಕು ವರ್ಷಗಳ ಕಾಲ ಘೋಷಿಸಿದ ನಂತರ, ಬಾಕಿಯಿರುವ ಸೊತ್ತನ್ನು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಮಕ್ಕಳಲ್ಲಿ ವಿತರಣೆ ಮಾಡಲಾಯಿತು.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ನಾಲ್ವರು ಪತ್ನಿಯಂದಿರಿದ್ದರು. ಪತ್ನಿಗಳಿಗೆ ಸಿಗಬೇಕಾದ ಸೊತ್ತಿನ ಎಂಟನೇ ಒಂದು ಭಾಗವನ್ನು ನಾಲ್ವರು ಪತ್ನಿಯರಲ್ಲಿ ವಿತರಣೆ ಮಾಡಲಾಯಿತು. ಹೀಗೆ ಪತ್ನಿಗಳಿಗೆ ಹನ್ನೊಂದು ಲಕ್ಷದಷ್ಟು ನೀಡಲಾಯಿತು. ಎಂದರೆ ಬಾಕಿಯಿರುವ ಸೊತ್ತಿನಿಂದ ಪ್ರತಿಯೋರ್ವ ಪತ್ನಿಗೆ ಹನ್ನೊಂದು ಲಕ್ಷಗಳಷ್ಟು ಲಭಿಸಿದುವು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಒಟ್ಟು ಸಂಪತ್ತು ಮೂರು ಕೋಟಿ 52 ಲಕ್ಷದಷ್ಟು ಆಗಿತ್ತು.

ಸುಫ್‌ಯಾನ್ ಬಿನ್ ಐನೀಯರ ಒಂದು ವರದಿ ಪ್ರಕಾರ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಒಟ್ಟು ವಾರಸು ಸೊತ್ತಾದ ನಾಲ್ಕು ಕೋಟಿಯನ್ನು ವಿತರಣೆ ಮಾಡಲಾಯಿತು. ಹಿಶಾಂ ಬಿನ್ ಉರ್‌ವ ತಮ್ಮ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರವರು ಬಿಟ್ಟು ಹೋದ ಆಸ್ತಿಯ ಬೆಲೆ 5 ಕೋಟಿ, ಇಪ್ಪತ್ತು ಲಕ್ಷಗಳು ಅಥವಾ 5 ಕೋಟಿ 10 ಲಕ್ಷಗಳಷ್ಟು ಆಗಿತ್ತು. ಇದೇ ರೀತಿಯಲ್ಲಿ ಉರ್‌ವ ವರದಿ ಮಾಡುತ್ತಾರೆ: ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಈಜಿಪ್ಟಿನಲ್ಲಿ ಸ್ವಲ್ಪ ಭೂಮಿಯಿತ್ತು, ಅಲೆಕ್ಸಾಂಡ್ರಿಯಾದಲ್ಲಿ ಸ್ವಲ್ಪ ಭೂಪ್ರದೇಶಗಳಿದ್ದುವು, ಕೂಫದಲ್ಲಿ ಸ್ವಲ್ಪ ತುಂಡು ನೆಲವಿತ್ತು. ಬಸ್‌ರಾದಲ್ಲಿ ಕೆಲವು ಮನೆಗಳಿದ್ದುವು. ಮದೀನದ ಸೊತ್ತಿನಿಂದ ಅವರಿಗೆ ವರಮಾನ ಲಭಿಸುತ್ತಿತ್ತು.

(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಸಂಪುಟ–3, ಪುಟ–80–81, ಝುಬೈರ್ ಬಿನುಲ್ ಅವಾಮ್ ದಾರುಲ್‌ಕುತುಬ್ ಇಲ್‌ಮಿಯ ಬೈರೂತ್, 1990)

ಹೇಗಿದ್ದರೂ ಅವರ ಎಲ್ಲ ಸಾಲಗಳನ್ನು ಸಂದಾಯ ಮಾಡಿದ ನಂತರ ಬಾಕಿಯಾದ ಆಸ್ತಿಗಳನ್ನು ವಾರಸುದಾರರಲ್ಲಿ ವಿತರಣೆ ಮಾಡಲಾಯಿತು.

ಮುತ್‌ರಫ್ ಹೇಳುತ್ತಾರೆ: ಒಂದು ಸಲ ನಾವು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರೊಡನೆ ಹೇಳಿದೆವು: ಹೇ ಅಬೂ ಅಬ್ದುಲ್ಲಾಹ್, ನೀವು ಯಾವ ಉದ್ದೇಶದಿಂದ ಬಂದಿರುವಿರಿ. ನೀವು ಒಬ್ಬ ಖಲೀಫರನ್ನು ನಷ್ಟಗೊಳಿಸಿದ್ದೀರಿ. ಅವರು ಶಹೀದ್ ಆದರು. ಈಗ ನೀವು ಅದರ ಪ್ರತಿಕಾರವನ್ನು ಕೇಳುತ್ತಿದ್ದೀರಿ. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾವು ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್, ಹಝ್ರತ್ ಅಬೂಬಕ್ಕರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹು, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಕಾಲದಲ್ಲಿ ಈ ಆಯತ್ತನ್ನು ಓದುತ್ತಿದ್ದೆವು: **ವತ್ತಖೂ ಫಿತ್‌ನತಲ್ಲಾ ತುಸೀಬನ್ನಲ್ಲಝೀನ ಝಲಮೂ ಮಿನ್‌ಕುಮ್ ಖಾಸ್ಸತನ್** (ಅಲ್‌ಅನ್‌ಫಾಲ್:26) ನಿಮ್ಮ ಪೈಕಿ ದುಷ್ಕೃತ್ಯ ಮಾಡಿದವರನ್ನು ಮಾತ್ರವೇ ಬಾಧಿಸದೆ (ನಮ್ಮನ್ನೂ ಬಾಧಿಸುವಂತಹ) ವಿಪತ್ತಿನ ಬಗ್ಗೆ ಜಾಗರೂಕರಾಗಿರಿ. ಎಂದರೆ ಅದು ಎಲ್ಲರನ್ನೂ ಬಾಧಿಸುವುದು. ಆದರೆ

ಈ ಪರೀಕ್ಷಣೆ ಬರುವ ತನಕ ಇದು ನಮಗೂ ಅನ್ವಯಿಸುವುದು ಎಂದು ನಾವು ಭಾವಿಸಿರಲಿಲ್ಲ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–1, ಪುಟ–451, ಮಸ್ನದ್ ಝುಬೈರ್ ಬಿನುಲ್ ಅವಾನ್, ಹದೀಸ್–1414, ಆಲಿಮುಲ್ ಕುತುಬ್ ಬೈರತ್ 1998)

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಖಿಲಾಫತಿನ ಚುನಾವಣೆಯ ಸ್ಥಿತಿಗತಿಗಳ ಬಗ್ಗೆ ವಿವರಿಸುತ್ತಾ ಹೇಳುತ್ತಾರೆ: ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಶಹಾದತಿನ ಘಟನೆ ನಡೆದಾಗ ಮುಸ್ಲಿಮರೆಡೆಯಲ್ಲಿ ಫಿತ್ನ ವರ್ಧಿಸುತ್ತಿರುವುದಾಗಿ ನೋಡಿದ ಮದೀನದಲ್ಲಿದ್ದ ಸಹಾಬಿವರ್ಯರು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಜನರ ಬೈಅತ್ ಸ್ವೀಕರಿಸಲು ವಿನಂತಿಸಿದರು. ಮತ್ತೊಂದು ಕಡೆ ಕೆಲವು ಕಲಹಪ್ರಿಯರು ಓಡಿಕೊಂಡು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಳಿಗೆ ಬಂದು ಹೀಗೆ ಹೇಳಿದರು: ಈಗ ಇಸ್ಲಾಮಿನ ಆಡಳಿತ ಬಿದ್ದುಹೋಗುವ ಅಪಾಯ ಕಂಡುಬರುತ್ತಿದೆ, ಆದ್ದರಿಂದ ಜನರ ಭಯ ದೂರಮಾಡಲು ಮತ್ತು ಶಾಂತಿಯನ್ನು ನೆಲೆಸಲು ಜನರಿಂದ ಬೈಅತ್ ಪಡೆಯಿರಿ. ಒಟ್ಟಿನಲ್ಲಿ ಹಲವು ಬಾರಿ ನಿರಾಕರಿಸಿದ ನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಬೈಅತ್ ಸ್ವೀಕರಿಸಲು ನಿರ್ಬಂಧಿಸಲಾಯಿತು. ಆಗ ಅವರು ಆ ಉತ್ತರದಾಯಿತ್ವವನ್ನು ಹೊರಲು ತಯಾರಾದರು. ಜನರ ಬೈಅತ್ ಸ್ವೀಕರಿಸಲು ಶುರುಮಾಡಿದರು. ಕೆಲವು ಪ್ರಮುಖ ಸಹಾಬಿವರ್ಯರು ಆಗ ಮದೀನದಿಂದ ಹೊರಗಿದ್ದರು. ಕೆಲವರಿಂದ ಒತ್ತಾಯದಿಂದ ಬೈಅತ್ ಮಾಡಿಸಲಾಯಿತು. ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಬಗ್ಗೆ ವರದಿಯಾಗಿರುವುದು ಏನೆಂದರೆ, ಅವರ ಬಳಿಗೆ ಹಕೀಂ ಬಿನ್ ಜಬ್ಲ ಮತ್ತು ಮಾಲಿಕ್ ಬಿನ್ ಉಶ್ತರ್‌ರನ್ನು ಕೆಲವು ಜನರೊಂದಿಗೆ ಕಳುಹಿಸಲಾಯಿತು. ಅವರಿಬ್ಬರ ಮುಂದೆ ನಿಂತು ಖಡ್ಗವನ್ನು ತೋರಿಸಿ ಅವರನ್ನು ಬೈಅತ್ ಮಾಡಲು ಒತ್ತಾಯ ಮಾಡಲಾಯಿತು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಕೈಯಲ್ಲಿ ಬೈಅತ್ ಮಾಡುವವರಾದರೆ ಮಾಡಿರಿ, ಇಲ್ಲದಿದ್ದರೆ ನಾವು ನಿಮ್ಮನ್ನು ಕೊಲ್ಲುವೆವು ಎಂದು ಕಲಹಪ್ರಿಯರು ಹೇಳಿದರು. ಅವರನ್ನು ಬಹಳ ಕಠಿಣವಾದ ರೀತಿಯಲ್ಲಿ ನೆಲದಲ್ಲಿ ಎಳೆದುಕೊಂಡು ಹೋಗಲಾಯಿತು ಎಂದು ಸಹ ಕೆಲವು ವರದಿಗಳಲ್ಲಿ ಬಂದಿವೆ. ಇಂತಹ ಬೈಅತನ್ನು ಬೈಅತ್ ಎಂದು ಹೇಳಲಾಗದು ಎಂಬುದು ಸ್ಪಷ್ಟ. ಹೀಗೆ ಅವರು ಬೈಅತ್ ಮಾಡಿದಾಗ, ಅವರು ಹೀಗೆ ಹೇಳಿದರು: ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಕೊಲೆಗಾರರಿಂದ ಪ್ರತಿಕಾರ ಮಾಡಬೇಕು ಎಂಬ ಶರತ್ತಿನೊಂದಿಗೆ ನಾವು ಬೈಅತ್ ಮಾಡುತ್ತೇವೆ. ಅನಂತರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಕೊಲೆಗಾರರರನ್ನು ಬೇಗನೆ ಶಿಕ್ಷಿಸುವುದನ್ನು ಕಾಣದಿರುವಾಗ ಅವರು ಬೈಅತಿನಿಂದ ಹಿಂಜರಿದು ಮದೀನದಿಂದ ಮಕ್ಕಕ್ಕೆ ಹೋದರು. ಹಝ್ರತ್ ಉಸ್ಮಾನ್ ರಝಿಯಲ್ಲಾಹುರ ಕೊಲೆಯಲ್ಲಿ ಭಾಗಿಯಾಗಿದ್ದ ಕಲಹಗಾರರಿಂದ ಒಂದು ಸಂಘ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾರ ಬಳಿಗೆ ಹೋಗಿ, ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ರಕ್ತದ ಪ್ರತಿಕಾರ ಮಾಡಲು ಜಿಹಾದ್ ಮಾಡಬೇಕೆಂದು ಹೇಳಿದರು. ಹೀಗೆ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ ಜಿಹಾದ್ ಮಾಡಲು ಘೋಷಿಸುತ್ತಾ ಸಹಾಬಿವರ್ಯರನ್ನು ಸಹಾಯಕ್ಕಾಗಿ ಕರೆದರು. ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಅವರೊಂದಿಗೆ ಸೇರಿದರು. ಇದರ ಪರಿಣಾಮವಾಗಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ವಿರುದ್ಧ ಹಝ್ರತ್ ಆಯಿಶಾ ರಝಿಯಲ್ಲಾಹು ಅನ್‌ಹಾ, ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಯುದ್ಧ ನಡೆಯಿತು. ಅದನ್ನು ಜಮಲ್ ಯುದ್ಧವೆಂದು ಕರೆಯಲಾಗುತ್ತದೆ. ಈ ಯುದ್ಧ ಆರಂಭವಾಗುವಾಗಲೇ, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ನಾಲಗೆಯಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಒಂದು ಭವಿಷ್ಯವಾಣಿ ಕೇಳಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಯುದ್ಧದಿಂದ ಬಿಟ್ಟುನಿಂತರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ವಿರುದ್ಧ ಯುದ್ಧ ಮಾಡುವುದಿಲ್ಲ, ವಿಷಯವನ್ನು ತಪ್ಪಾಗಿ ತಿಳಿದುಕೊಂಡಿದ್ದೆ ಎಂದು ಹೇಳಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಯುದ್ಧದಿಂದ ಆರಂಭದಿಂದಲೇ ಬಿಟ್ಟುನಿಂತಿದ್ದರು. ಇನ್ನೊಂದು ಕಡೆ ಹಝ್ರತ್ ತಲ್‌ಹ ತನ್ನ ಮರಣಕ್ಕೆ ಮುಂಚೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಕೈಯಲ್ಲಿ ಬೈಅತ್ ಮಾಡುವುದನ್ನು ಸಮ್ಮತಿಸಿದರು. ಅವರ ಬಗ್ಗೆ ಹೀಗೆ ವರದಿಯಾಗಿದೆ: ಅವರು ಗಾಯದ ನೋವಿನಿಂದ ನರಳಾಡುತ್ತಿದ್ದಾಗ, ಒಬ್ಬ ವ್ಯಕ್ತಿ ಅವರ ಸಮೀಪದಿಂದ ಹಾದು ಹೋಗುತ್ತಿದ್ದರು. "ನೀನು ಯಾರ ಪಕ್ಷದಲ್ಲಿರುವೆ" ಎಂದು ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು ಆ ವ್ಯಕ್ತಿಯೊಡನೆ ಕೇಳಿದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಪಕ್ಷದಲ್ಲಿ ಎಂದು ಆ ವ್ಯಕ್ತಿ ಹೇಳಿದ. ಆಗ ಅವರು ಆ ವ್ಯಕ್ತಿಯ ಕೈಯಲ್ಲಿ ತನ್ನ ಕೈಯನ್ನು ಇಟ್ಟುಕೊಂಡು, "ನಿನ್ನ ಕೈ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಕೈಯಾಗಿದೆ. ನಾನು ನಿನ್ನ ಕೈಯಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಪುನಃ ಬೈಅತ್ ಮಾಡುತ್ತೇನೆ" ಎಂದು ಹೇಳಿದರು. ಹೇಗಿದ್ದರೂ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಶಹಾದತ್ ಜಮಲ್ ಯುದ್ಧದಲ್ಲಿ ಭಾಗವಹಿಸದೆ ಮರಳಿ ಬರುವಾಗ ಆಯಿತೆಂದು ಬರೆಯಲಾಗಿದೆ. "ನನ್ನಿಂದ ತಪ್ಪಾಯಿತು" ಎಂದು ಹೇಳಿ ಅವರ ಯುದ್ಧದಿಂದ ಸಂಪೂರ್ಣವಾಗಿ ಬಿಟ್ಟುನಿಂತರು. ಆದರೆ ಯುದ್ಧ ಮಾಡದೆ ಮರಳಿ ಬರುವಾಗ ಅವರನ್ನು ಶಹೀದ್ ಮಾಡಲಾಯಿತು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಅವರೊಡನೆ ಹೇಳಿದ್ದರು: ಅಲ್ಲಾಹನಾಣೆ ಹಾಕಿ ಹೇಳುತ್ತೇನೆ, ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾಗಿ ನೀನು ಕೇಳಲಿಲ್ಲವೇ? ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದ್ದರು, ನೀನು ಅಲಿಯ ವಿರುದ್ಧ ಹೋರಾಡುವೆ, ಆದರೆ ತಪ್ಪು ನಿನ್ನ ಕಡೆಯಿಂದ ಆಗಿರುವುದು. ಇದನ್ನು ಕೇಳಿದಾಗ ಹಝ್ರತ್ ಝುಬೇರ್ ಹೇಳಿದರು: ಹೌದು, ಈ ಸಂಗತಿ ನನಗೆ ಈಗ ನೆನಪಿಗೆ ಬಂತು ಎಂದು ಹೇಳಿ ಅವರು ಅಲ್ಲಿಂದ ಹೊರಟುಹೋದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ವಿರುದ್ಧ ಯುದ್ಧ ಮಾಡುವುದರಿಂದ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹಿಂದೆ ಸರಿಯಲು ಇದೇ ಕಾರಣವಾಗಿತ್ತು. ಇದರ ವಿಶದವಿವರಣೆ ಹಝ್ರತ್ ತಲ್‌ಹ ಬಿನ್ ಉಬೈದುಲ್ಲಾಹ್ ರಝಿಯಲ್ಲಾಹು ಅನ್‌ಹುರ ಪ್ರಸ್ತಾಪದಲ್ಲಿ ಆಗಿತ್ತು. ಇದೆಲ್ಲ ಕಲಹಗಾರರು ಮತ್ತು ಕಪಟವಿಶ್ವಾಸಿಗಳು ಹಚ್ಚಿದ ಬೆಂಕಿಯಾಗಿತ್ತು ಎಂದು ಇದರಿಂದ ವ್ಯಕ್ತವಾಗುತ್ತದೆ. ಅದರಲ್ಲಿ ಹಲವಾರು ಸಹಾಬಿವರ್ಯರು ತಪ್ಪುಗ್ರಹಿಕೆಯ ಕಾರಣ ಒಳಪಟ್ಟರು. ಹೇಗಿದ್ದರೂ ನಡೆದದ್ದೆಲ್ಲ ತಪ್ಪೇ ಆಗಿತ್ತು.

ಹರಬ್ ಬಿನ್ ಅಬುಲ್ ಅಸ್ವದ್ ಹೇಳುತ್ತಾರೆ: ನಾನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಭೇಟಿಯಾದೆ. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ತಮ್ಮ ಸವಾರಿಯಲ್ಲಿ ಸವಾರರಾಗಿ ಸೈನ್ಯದ ಪಂಕ್ತಿಯನ್ನು ಮುರಿಯುತ್ತಾ ಯುದ್ಧದಿಂದ ಮರಳಿ ಬರುತ್ತಿದ್ದರು. ಮುಂದಿನಿಂದ ಅವರ ಮಗನಾದ ಅಬ್ದುಲ್ಲಾಹ್ ಬಂದರು. ನಿಮಗೆ ಏನಾಯಿತು ಎಂದು ಹಝ್ರತ್ ಝುಬೇರ್‌ರೊಡನೆ ಕೇಳಿದರು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಮಗನೊಡನೆ ಹೇಳಿದರು: ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ನನಗೆ ಒಂದು ಹದೀಸನ್ನು ನೆನಪಿಸಿ ಕೊಟ್ಟಿರುವರು. ಅದನ್ನು ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದನ್ನು ನಾನು ಸ್ವತಃ ಕೇಳಿದ್ದೆ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದರು: ನೀನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಯುದ್ಧ ಮಾಡುವಿ, ಆ ಯುದ್ಧದಲ್ಲಿ ನೀನು ದೌರ್ಜನ್ಯಗಾರನಾಗುವಿ. ಇದನ್ನು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ನನಗೆ ನೆನಪಿಸಿಕೊಟ್ಟ ಕಾರಣ ನಾನು ಅವರೊಡನೆ ಯುದ್ಧ ಮಾಡುವುದಿಲ್ಲ. ಇದನ್ನು ಕೇಳಿದಾಗ ಅವರ ಮಗನು ಹೇಳಿದನು: ನೀವು ಜನರೆಡೆಯಲ್ಲಿ ಮೈತ್ರಿಸಂಧಾನ ಮಾಡಲು ಬಂದಿರುವಿರಿ. ಅಲ್ಲಾಹನ ನಿಮ್ಮ ಮೂಲಕ ಈ ವಿಷಯದಲ್ಲಿ ಮೈತ್ರಿ ಉಂಟುಮಾಡುವನು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳಿದರು: ನಾನೀಗ ಇದರಿಂದ ಬಿಟ್ಟು ನಿಲ್ಲುವೆನು ಎಂದು ಆಣೆ ಹಾಕಿಯಾಯಿತು. ಹಝ್ರತ್ ಅಬ್ದುಲ್ಲಾಹ್ ಬಿನ್ ಝುಬೇರ್ ಹೇಳಿದರು: ನೀವು ಹಾಕಿದ ಆಣೆಗೆ ಪ್ರಾಯಶ್ಚಿತ್ತ ನೀಡಿರಿ. ಅದಕ್ಕಾಗಿ ನಿಮ್ಮ ಗುಲಾಮರಾದ ಜರ್‌ಜಸ್‌ರನ್ನು ಬಿಡುಗಡೆಗೊಳಿಸಿರಿ ಮತ್ತು ಅಲ್ಲಾಹನು ಜನರ ನಡುವೆ ಮೈತ್ರಿ ಉಂಟುಮಾಡುವ ವರೆಗೆ ನೀವು ಇಲ್ಲೇ ನಿಲ್ಲಿರಿ. ವರದಿಗಾರ ಹೇಳುತ್ತಾರೆ: ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ತನ್ನ ಗುಲಾಮನಾದ ಜರ್‌ಜಸ್‌ನನ್ನು ಬಿಡುಗಡೆಗೊಳಿಸಿ ಅಲ್ಲೇ ನಿಂತರು. ಆದರೆ ಜನರ ನಡುವೆ ಭಿನ್ನತೆ ಇನ್ನೂ ಹೆಚ್ಚಾದಾಗ ಅವರು ಕುದುರೆಯಲ್ಲಿ ಸವಾರರಾಗಿ ಅಲ್ಲಿಂದ ಹೊರಟುಹೋದರು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಮರಳುವ ಉದ್ದೇಶದಿಂದ ಮದೀನದ ಕಡೆಗೆ ಹೊರಟು ಬಸ್‌ರಾದ ಸಮೀಪವಿರುವ ಸಫ್‌ವಾನ್ ಎಂಬ ಸ್ಥಳಕ್ಕೆ ತಲುಪಿದರು. ಅಲ್ಲಿ ಬನೂ ಮಜಾಶಿಅ ಗೋತ್ರದ ಬಕರ್ ಎಂಬ ಹೆಸರಿನ ವ್ಯಕ್ತಿಯನ್ನು ಭೇಟಿಯಾದರು. ಆ ವ್ಯಕ್ತಿ ಕೇಳಿದರು: ಹೇ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಹವಾರಿ, ನಿಮ್ಮ ಸಂರಕ್ಷಣೆ ನನ್ನ ಹೊಣೆಯಾಗಿದೆ. ನಿಮ್ಮ ಸಮೀಪ ಯಾರೂ ತಲುಪದು. ಆ ವ್ಯಕ್ತಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಜೊತೆಯಾದರು. ರಸ್ತೆಯಲ್ಲಿ ಅಹ್‌ನಫ್ ಬಿನ್ ಖೈಸ್ ಎಂಬ ವ್ಯಕ್ತಿಯನ್ನು ಭೇಟಿಯಾದರು. 'ಇವರು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಆಗಿರುವರು, ಇವರನ್ನು ನಾನು ಸಫ್‌ವಾನ್ ಎಂಬ ಸ್ಥಳದಲ್ಲಿ ಭೇಟಿಯಾದೆ' ಎಂದು ಬಕರ್ ಅವರೊಡನೆ ಹೇಳಿದರು. ಅಹ್‌ನಫ್ ಹೇಳಿದ: ಮುಸ್ಲಿಮರ ಎರಡು ಪಕ್ಷಗಳು ಪರಸ್ಪರ ಕಾದಾಡುತ್ತಿದ್ದಾರೆ ಮತ್ತು ಖಡ್ಗಗಳಿಂದ

ಅನ್ಯೋನ್ಯ ತಲೆಗಳನ್ನು ಕಡಿಯುತ್ತಿದ್ದಾರೆ. ಹೀಗಿರುವಾಗ ಇವರು ತಮ್ಮ ಮಕ್ಕಳು ಮತ್ತು ಕುಟುಂಬವನ್ನು ಭೇಟಿಯಾಗಲು ಹೋಗುತ್ತಿದ್ದಾರೆಯೇ? ಉಮೈರ್ ಬಿನ್ ಜರ್ಮೂಝ್, ಫಝಾಲ ಬಿನ್ ಹಾಬಸ್ ಮತ್ತು ನುಫೈಲ್ ಈ ಮಾತುಗಳನ್ನು ಕೇಳಿದಾಗ ಸವಾರರಾಗಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಹಿಂಬಾಲಿಸಿದರು. ಅವರನ್ನು ಒಂದು ಸಂಘದವರೊಡನೆ ಇರುವುದಾಗಿ ಕಂಡರು. ಉಮೇರ್ ಬಿನ್ ಜರ್ಮೂಝ್ ಸವಾರರಾಗಿ ಹಿಂದಿನಿಂದ ಬಂದು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಮೇಲೆ ಈಟಿಯಿಂದ ಹಲ್ಲೆ ಮಾಡಿ ಹಗುರವಾಗಿ ಗಾಯಗೊಳಿಸಿದರು. ಝುಲ್‌ಖಿಮಾರ್ ಎಂಬ ಹೆಸರಿನ ಕುದುರೆಯ ಮೇಲೆ ಸವಾರರಾಗಿದ್ದ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಸಹ ಅವನ ಮೇಲೆ ಹಲ್ಲೆ ಮಾಡಿದರು. ತಾನು ಕೊಲ್ಲಲ್ಪಡುವೆನು ಎಂದು ಇಬ್ನು ಜರ್ಮೂಝ್‌ಗೆ ಭಯವಾದಾಗ ಅವನು ತನ್ನ ಎರಡು ಸಂಗಡಿಗರನ್ನು ಸಹಾಯಕ್ಕಾಗಿ ಜೋರಾಗಿ ಕರೆದನು. ಇವರು ಸೇರಿಕೊಂಡು ಹಲ್ಲೆ ನಡೆಸಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಶಹೀದ್ ಮಾಡಿದರು. ಇನ್ನೊಂದು ವರದಿಯ ಪ್ರಕಾರ ಹೀಗೆ ಬಂದಿದೆ. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ತನ್ನ ಕೊಲ್ಲಲು ಬಂದವನ ಮುಂದೆ ಬಂದು ಅವನ ಮೇಲೆ ಮೇಲುಗೈ ಸಾಧಿಸಿದ್ದರು. ಆದರೆ ಅವನು ಅಲ್ಲಾಹನ ಹೆಸರಲ್ಲಿ ಬಿಟ್ಟುಬಿಡಲು ಹಲವು ಬಾರಿ ಯಾಚನೆ ಮಾಡಿದನು. ಇದನ್ನು ಕೇಳಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಕೊಲ್ಲುವುದರಿಂದ ಹಿಂದೆ ಸರಿದರು. ಆದರೆ ಬಿಟ್ಟಾಗ ಅವನು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಮೋಸಮಾಡಿ ಗಾಯಗೊಳಿಸಿದನು. ಆಗ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಹೇಳಿದರು: ಅಲ್ಲಾಹನು ನಿನ್ನನ್ನು ನಾಶಮಾಡಲಿ. ನೀನು ಅಲ್ಲಾಹನ ಹೆಸರಲ್ಲಿ ಯಾಚಿಸಿ, ಸ್ವತಃ ಅದನ್ನು ಮರೆತುಬಿಟ್ಟಿಯಾ? ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಶಹೀದ್ ಮಾಡಿದ ನಂತರ ಇಬ್ನು ಜರ್ಮೂಝ್ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಳಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ತಲೆ ಮತ್ತು ಖಡ್ಗವನ್ನು ತಂದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಆ ಖಡ್ಗವನ್ನು ಪಡೆದು ಹೇಳಿದರು: ಅಲ್ಲಾಹನಾಣೆ, ಈ ತಲವಾರಿನಿಂದ ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಅಸ್ವಸ್ಥತೆ ದೂರವಾಗುತ್ತಿತ್ತು. ಆದರೆ ಇಂದು ಇದು ಮರಣ ಮತ್ತು ಕಲಹದ ಖಡ್ಗವಾಗಿದೆ. ಇಬ್ನು ಜರ್ಮೂಝ್ ಒಳಗೆ ಬರಲು ಅನುಮತಿ ಕೇಳಿದರು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಕೊಲೆಗಾರನಾದ ಇಬ್ನು ಜರ್ಮೂಝ್ ಬಾಗಿಲಿನ ಹೊರಗೆ ನಿಂತು ಒಳಗೆ ಬರಲು ಅನುಮತಿ ಕೇಳುತ್ತಿದ್ದಾನೆ ಎಂದು ಕಾವಲುಗಾರ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ತಿಳಿಸಿದನು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳಿದರು: ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಕೊಲೆಗಾರನಾದ ಇಬ್ನು ಸಫಿಯಾ ನರಕದಲ್ಲಿ ಪ್ರವೇಶಿಸಲಿ. ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲರು ಹೇಳಿದ್ದಾಗಿ ನಾನು ಕೇಳಿದ್ದೇನೆ – ಪ್ರತಿ ಪ್ರವಾದಿಗೂ ಒಬ್ಬ ಹವಾರಿ ಅಥವಾ ಸಹಾಯಕ ಇರುತ್ತಾರೆ, ನನ್ನ ಹವಾರಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಆಗಿರುವರು. ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರನ್ನು ಸಿವಾ ಎಂಬ ಕಣಿವೆಯಲ್ಲಿ ದಫನ್ ಮಾಡಲಾಯಿತು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮತ್ತು ಅವರ ಸಹಚರರು ಅಲ್ಲಿ ಕುಳಿತುಕೊಂಡು ಅಳುತ್ತಿದ್ದರು. ಶಹಾದತ್ ಸಮಯದಲ್ಲಿ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ 64 ವಯಸ್ಸಿತ್ತು. ಕೆಲವರ ಪ್ರಕಾರ ಅವರಿಗೆ ಆ ಸಮಯದಲ್ಲಿ 66 ಅಥವಾ 67 ವಯಸ್ಸಿತ್ತು. (ಮುಸ್ತದ್‌ರಿಕೆ ಅಲಸ್ಸಹೀಹೈನ್ ಲಿಲ್ಹಾಕಿಮ್, ಸಂಪುಟ–3, ಪುಟ–413, ಹದೀಸ್–5575, ಬಾಬ್ ಮಾರಿಫತಿಸ್ಸಹಾಬ, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್) (ಅಲ್‌ಇಸ್ತಿಯಾಬ್ ಫೀ ಮಾರಿಫತಿಲ್ ಅಸ್ಹಾಬ್, ಸಂಪುಟ–2, ಪುಟ–516, ಝುಬೈರ್ ಬಿನುಲ್ ಅವಾಮ್, ದಾರುಲ್ ಜೀಲ್ ಬೈರೂತ್ 1996) (ಮುಸ್ತದ್‌ರಿಕ್ ಅಲಸ್ಸಹೀಹೈನ್ ಲಿಲ್‌ಹಾಕಿಮ್, ಸಂಪುಟ–3, ಪುಟ–412, ಹದೀಸ್–5571, ದಾರುಲ್‌ಕುತುಬ್ ಅಲ್‌ಅರಬೀಯ ಬೈರೂತ್) (ಅತ್ತಬಖಾತುಲ್ ಕುಬ್ರ, ಭಾಗ–3, ಪುಟ–83, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1990) (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–83, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990) (ಅಲ್‌ಅಸಾಬ ಫೀ ತಮೀಝಿಸ್ಸಹಾಬ, ಸಂಪುಟ–2, ಪುಟ–460, ದಾರುಲ್‌ಕುತುಬ್ ಇಲ್‌ಮಿಯ ಬೈರೂತ್ 1995)

ಹಝ್ರತ್ ಆತಿಕಾ ಬಿನ್ತ್ ಝೈದ್ ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರ ಪತ್ನಿಯಾಗಿದ್ದರು. ಯಾರು ಶಹೀದ್ ಆಗಲು ಇಚ್ಛಿಸುತ್ತಾರೋ ಅವರು ಆತಿಕಾ ಬಿನ್ತ್ ಝೈದ್‌ರನ್ನು ನಿಕಾಹ್ ಮಾಡಲಿ ಎಂದು ಮದೀನದ ಜನರು ಹೇಳುತ್ತಿದ್ದರು. ಮೊದಲು ಆತಿಕಾ ರಝಿಯಲ್ಲಾಹು ಅನ್‌ಹಾರನ್ನು ಅಬ್ದುಲ್ಲಾಹ್ ಬಿನ್ ಅಬೀ ಬಕ್ಕರ್ ವಿವಾಹ ಮಾಡಿದರು. ಅವರು ಶಹೀದ್ ಆದರು.ಅನಂತರ ಅವರನ್ನು ಉಮರ್ ಬಿನ್ ಖತ್ತಾಬ್ ನಿಕಾಹ್ ಮಾಡಿದರು. ಅವರು ಸಹ ಶಹೀದ್ ಆದರು. ಅನಂತರ ಅವರನ್ನು ಹಝ್ರತ್ ಝುಬೇರ್ ಬಿನ್ ಅವಾಮ್ ರಝಿಯಲ್ಲಾಹು ಅನ್‌ಹು ಮದುವೆಯಾದರು. ಅವರು ಸಹ ಶಹೀದ್ ಆಗಿ ಅವರಿಂದ ಬೇರ್ಪಟ್ಟರು.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಶಹೀದ್ ಆದಾಗ ಹಝ್ರತ್ ಆತಿಕ ರಝಿಯಲ್ಲಾಹು ಅನ್‌ಹು ಈ ಪದ್ಯವನ್ನು ಹೇಳಿದರು:

**ಗ಼ದರಿಬ್ನು ಜರ್ಮೂಝ್ ಬಿಫಾರಿಸಿ ಬುಹ್‌ಮ**
**ಯೌಮಲ್ಲಿಖಾಇ ಕಾನ ಗೈರ ಮುಅ್‌ರದ್!!**
**ಯಾ ಅಮ್‌ರು ಲೌ ನಬ್ಬಹ್ತಹೂ ಲವಜತ್ತಹೂ**
**ಲಾ ತಾಇಶನ್ ರಅ್‌ಶಲ್ಲಿಸಾನಿ ವಲಾ ಅಲೀದ್!!**
**ಶಲ್ಲತ್ ಯಮೀನುಕ ಅನ್‌ಖತಲ್ತ ಲಮುಸ್ಲಿಮಾ**
**ಹಲ್ಲತ್ ಅಲೈಕ ಅಖೂಬತಿಲ್ ಮುತಅಮ್ಮಿದ!!**
**ಸಕುಲತ್ ಉಮ್ಮುಕ ಝುಫರ್‌ತ ಬಿಮಿಸ್‌ಲಿಹೀ**
**ಫೀಮನ್ ಮಝಾ ಫೀಮಾ ತರೂಹು ಫತಖ್‌ತದೀ!!**
**ಕಮ್ ಗ಼ಮ್‌ರತಿನ್ ಖಾ಼ಝುಹಾ ಲಮ್ ಯಸ್‌ನಹು**
**ಅನ್‌ಹಾ ತರಾದುಕ ಯಾಬ್ನು ಫಖುಲುಲ್ ಖರ್‌ದದ!!**

ಎಂದರೆ, ಇಬ್ನು ಜರ್ಮೂಝ್ ಯುದ್ದ ದಿವಸ ಆ ಶೂರನಾದ ಸವಾರನೊಂದಿಗೆ ಮೋಸಮಾಡಿದ. ಅವರು ಮೈದಾನದಿಂದ ಓಡಿಹೋಗುವ ವ್ಯಕ್ತಿಯಲ್ಲ. ಎಲೈ ಅಮ್‌ರ್ ಬಿನ್ ಜರ್ಮೂಝ್ ನೀನು ಅವರನ್ನು ತಿಳಿಸಿ ಹಲ್ಲೆ ಮಾಡಿದ್ದರೆ ಅವರನ್ನು ನೀನು ಹೃದಯ ಮತ್ತು ಕೈಗಳು ನಡುಗುವ ಒಬ್ಬ ಪೌರುಷವಿಲ್ಲದ ವ್ಯಕ್ತಿಯಾಗಿ ಕಾಣುತ್ತಿರಲಿಲ್ಲ. ನಿನ್ನ ಕೈಗಳು ಮರಗಟ್ಟಲಿ ಮತ್ತು ನಿಶ್ಚೇತನಗೊಳ್ಳಲಿ. ನೀನು ಒಬ್ಬ ಮುಸ್ಲಿಮನನ್ನು ಕೊಲೆ ಮಾಡಿದೆ. ತಪ್ಪು ಮಾಡಿತ್ತಿರುವೆ ಎಂದು ಅರಿತು ಸಹ ಕೊಲೆಮಾಡಿದ್ದಕ್ಕೆ ಸಿಗುವ ಶಿಕ್ಷೆ ನಿನಗೆ ಎರಗುವುದು. ನಿನ್ನ ಕೆಟ್ಟದಾಗಲಿ, ನನಗೆ ಎಂದಾದರೂ ಅವರ ಕಾಲದಲ್ಲಿದ್ದ ಯಾರ ಮೇಲೆಯಾದರೂ ಮೇಲುಗೈ ಸಾಧಿಸಲು ಸಾಧ್ಯವಿತ್ತೋ? ಎಲೈ ಹಗುರವಾದ ಕಷ್ಟತೆಯನ್ನು ಸಹ ಸಹಿಸಲು ಸಾಧ್ಯವಿಲ್ಲದವನೇ, ಝುಬೇರ್ ಅಂತು, ಎಂತಹ ಕಠಿಣ ಅವಸ್ಥೆಗಳು ಬಂದರೂ ಯುದ್ಧ ಮೈದಾನದಲ್ಲಿ ಅಚಲರಾಗಿ ನಿಲ್ಲುವ ವ್ಯಕ್ತಿಯಾಗಿದ್ದರು. ಎಲೈ ಬಿಳಿ ಮುಖದವನೇ, ನನ್ನ ಈಟಿಯ ಪ್ರಯೋಗದಿಂದ ಅವರಿಗೆ ಯಾವುದೇ ಹಾನಿ ಉಂಟಾಗುತ್ತಿರಲಿಲ್ಲ. (ಎಂದರೆ ಅವರನ್ನು ಮೋಸದಿಂದ ಶಹೀದ್ ಮಾಡಲಾಗಿತ್ತು)
(ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–83, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ತಬ್‌ಕಾತುಲ್‌ಕುಬ್ರದಲ್ಲಿ ಹೀಗೆ ವರದಿಯಾಗಿದೆ: ಇಬ್ನು ಜರ್ಮೂಝ್ ಬಂದು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರೊಡನೆ ಒಳಗೆ ಬರಲು ಅನುಮತಿ ಕೇಳಿದಾಗ, ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಅವನಿಂದ ದೂರವಿರಲು ಬಯುಸಿದರು. ಆಗ ಅವನು ಹೇಳಿದನು: ಝುಬೇರ್, ವಿಪತ್ತುಗಾರರಲ್ಲಿ ಒಳಪಟ್ಟವರಾಗಿರಲಿಲ್ಲವೇ? ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಹೇಳಿದರು: ನೀನು ಮಣ್ಣು ಪಾಲಾಗಲಿ, **ವನಝಅ್‌ನ ಮಾಫೀ ಸುದೂರಿಹಿಮ್ ಮಿನ್ ಗಿಲ್ಲಿ ಇಖ್ವಾನನ್ ಅಲಾ ಸುರೂರಿಮ್ಮುತಖಾಬಿಲೀನ್** (ಅಲ್‌ಹಿಜರ್:48) ಅವರ ಹೃದಯಗಳಲ್ಲಿರುವ ಯಾವುದೇ ಹಗೆ – ದ್ವೇಷವನ್ನೂ ನಾವು ನೀಗಿಸುವೆವು. ಹಾಗೆ ಅವರು ಪರಸ್ಪರ ಸಹೋದರರಂತೆ ಆರಾಮಾಸನಗಳಲ್ಲಿ ಅಭಿಮುಖವಾಗಿ ಕುಳಿತುಕೊಳ್ಳುವರು. (ಅತ್ತಬಖಾತುಲ್ ಕುಬ್ರ ಲಿಇಬ್ನೆ ಸಅದ್, ಭಾಗ–3, ಪುಟ–84, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 1990)

ಎಂಬ ಆಯತಿನಲ್ಲಿ ಅಲ್ಲಾಹನು ಹೇಳಿದ ಜನರಲ್ಲಿ ಹಝ್ರತ್ ತಲ್‌ಹ ರಝಿಯಲ್ಲಾಹು ಅನ್‌ಹು ಮತ್ತು ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಒಳಪಟ್ಟಿರುವರು ಎಂದು ನಾನು ಪ್ರತೀಕ್ಷಿಸುತ್ತೇನೆ.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹು ಬೇರೆ ಬೇರೆ ಸಮಯದಲ್ಲಿ ಹಲವು ನಿಕಾಹ್‌ಗಳನ್ನು ಮಾಡಿದರು. ಅವರಿಗೆ ಹಲವು ಮಕ್ಕಳು ಸಹ ಇದ್ದುವು. ಅದರ ವಿವರ ಹೀಗಿವೆ:

ಹಝ್ರತ್ ಅಸ್ಮಾ ಬಿನ್ತ್ ಅಬೂಬಕ್ಕರ್; ಅವರಿಂದ ಅಬ್ದುಲ್ಲಾಹ್, ಉರ್‌ವ, ಮುಂಝಿರ್, ಆಸಿಮ್, ಖದೀಜತುಲ್ ಕುಬ್ರ, ಉಮ್ಮುಲ್ ಹಸನ್ ಮತ್ತು ಆಯಿಶಾ ಹುಟ್ಟಿದರು.

ಹಝ್ರತ್ ಉಮ್ಮೇ ಖಾ಼ಲಿದ್‌ರಿಂದ ಖಾಲಿದ್, ಅಮ್‌ರ್, ಹಬೀಬ, ಸೌದ, ಹಿಂದ್ ಹುಟ್ಟಿದರು.

ಹಝ್ರತ್ ಝುಬಾಬ್ ಬಿನ್ ಹನೀಫ್‌ರಿಂದ ಹುಟ್ಟಿದ ಮಕ್ಕಳು, ಮುಸ್‌ಅಬ್, ಹಮ್‌ಝು, ರಮ್‌ಲ ಆಗಿದ್ದರು.

ಹಝ್ರತ್ ಝೈನಬ್ ಉಮ್ಮೇ ಜಾಫರ್ ಬಿನ್ತ್ ಮರ್ಸದ್‌ರಿಂದ ಉಬೈದ ಮತ್ತು ಜಾಫರ್ ಹುಟ್ಟಿದ್ದರು.

ಹಝ್ರತ್ ಉಮ್ಮೇ ಕುಲ್ಸುಮ್ ಬಿನ್ತ್ ಅಕೂಅ್‌ರಿಂದ ಝೈನಬ್ ಹುಟ್ಟಿದ್ದರು.

ಹಝ್ರತ್ ಹಿಲಾಲ್ ಬಿನ್ತ್ ಖೈಸ್‌ರಿಂದ ಖದೀಜತುಲ್ ಸುಗ್ರ ಹುಟ್ಟಿದರು.

ಹಝ್ರತ್ ಆತಿಕಾ ಬಿನ್ತ್ ಝೈದ್ ಸಹ ಇವರ ಪತ್ನಿಯಾಗಿದ್ದರು.

ಹಝ್ರತ್ ಝುಬೇರ್ ರಝಿಯಲ್ಲಾಹು ಅನ್‌ಹುರಿಗೆ ಸಂಬಂಧಿಸಿದ ಎಲ್ಲ ಘಟನೆಗಳು ಮುಕ್ತಾಯವಾಯಿತು.

ಈಗ ನಾನು ಕೆಲವು ದಿವಂಗತರ ಬಗ್ಗೆ ಪ್ರಸ್ತಾಪಿಸುವೆನು. ಜುಮಾ ನಮಾಝ್ ನಂತರ ಅವರ ಜನಾಝ ನಮಾಝ್ ಸಹ ನಿರ್ವಹಿಸುವೆನು. ಅವರಲ್ಲಿ ಮೊದಲಿನ ಪ್ರಸ್ತಾಪ ಅಲ್‌ಹಾಜೀ ಇಬ್ರಾಹೀಂ ಮುಬಾಈ ಸಾಹಿಬ್ ನಾಇಬ್ ಅಮೀರ್ ಗ್ಯಾಂಬಿಯಾದ್ದಾಗಿದೆ. ಅವರು ಆಗಸ್ಟ್ ಹತ್ತರಂದು ವಫಾತಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅವರು 1944ರಲ್ಲಿ, ಜೂನ್ 4ರಂದು ಬಾಂಜಲ್ ಎಂಬಲ್ಲಿ ಹುಟ್ಟಿದರು. ಗ್ಯಾಂಬಿಯಾದ ಮಾಜಿ ಜಮಾಅತ್ ಅಮೀರಾಗಿದ್ದ ದಿವಂಗತ ಚೌಧರಿ ಶರೀಫ್ ಅಹ್ಮದ್ ಸಾಹಿಬರ ಕಾಲದಲ್ಲಿ, ಎಂದರೆ 1962, 63ರ ಕಾಲದಲ್ಲಿ ಅವರು ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಆ ಜಮಾಅತಿನ ಪ್ರಾರಂಭಿಕ ಮೆಂಬರ್‌ಗಳಲ್ಲಿ ಒಬ್ಬರಾಗಿದ್ದರು. ನಿಯತವಾಗಿ ಐದು ಹೊತ್ತಿನ ನಮಾಝ್ ಮತ್ತು ತಹಜ್ಜುದ್ ನಿರ್ವಹಿಸುವ ಅಭ್ಯಾಸವಿರುವವರಾಗಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿ ಸಹ ಆಗಿದ್ದರು. ಧನತ್ಯಾಗದ ಕಾರ್ಯದಲ್ಲಿ ಸದಾ ಮುಂದಿದ್ದರು. ದಿವಂಗತರು ಪವಿತ್ರ ಖುರ್‌ಆನಿನ ಪ್ರೇಮಿಯಾಗಿದ್ದರು. ನಿಯತವಾಗಿ ಪವಿತ್ರ ಖುರ್‌ಆನಿನ ಪಾರಾಯಣ ಮಾಡುತ್ತಿದ್ದರು. ಅವರು ದೀರ್ಘ ಕಾಲದ ವರೆಗೆ ಧಾರ್ಮಿಕ ಸೇವೆಯ ಸೌಭಾಗ್ಯ ಪಡೆದಿದ್ದರು. ಅದರೊಂದಿಗೆ ಜಲ್ಸ ಸಾಲಾನಾದ ಆಫಿಸರ್, ಉಮೂರೇ ಖಾರ್ಜದ ನೇಶನಲ್ ಸೆಕ್ರಟರಿ ಮತ್ತು ಗ್ಯಾಂಬಿಯಾದ ಸದರ್ ಮಜ್ಲಿಸ್ ಅನ್ಸಾರುಲ್ಲಾಹ್ ಆಗಿ ಸೇವೆ ಮಾಡಲು ಸೌಭಾಗ್ಯ ಪಡೆದರು. ಮಸ್‌ರೂರ್ ಸೆಕೆಂಡರಿ ಸ್ಕೂಲಿನ ಬೋರ್ಡ್ ಮೆಂಬರ್ ಸಹ ಆಗಿದ್ದರು. ಕ್ವಾಲಿಫೈಡ್ ಟೀಚರ್ ಆಗಿದ್ದರು ಎಂದರೆ, ದಕ್ಷರಾದ ಅಧ್ಯಾಪಕರಾಗಿದ್ದರು. ದೇಶದ ವಿವಿಧ ಪ್ರದೇಶಗಳಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದರು. ತಮ್ಮ ಫೀಲ್ಡ್‌ನಲ್ಲಿ ಉನ್ನತ ಶಿಕ್ಷಣ ಮತ್ತು ಮಾಸ್ಟರ್ ಪಡೆಯಲು ಅಮೇರಿಕ ಹೋಗಿದ್ದರು. ಮರಳಿ ಬಂದು ದೇಶ ಮತ್ತು ಕೋಮಿಗೆ ಸೇವೆ ಸಲ್ಲಿಸಿದರು. ಗ್ಯಾಂಬಿಯಾದ ಪ್ರಸಿದ್ಧ ಸಂಸ್ಥೆಯಾದ ಮೇನೇಜ್‌ಮೆಂಟ್ ಡೆವಲಪ್‌ಮೆಂಟ್ ಇನ್ಸ್‌ಟಿಟ್ಯೂಟಿನ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು. ಈ ಸಂಸ್ಥೆ ಗ್ಯಾಂಬಿಯಾದ ಸಿವಿಲ್ ಸರ್ವಂಟ್ಸ್ ಮತ್ತು ಇತರ ಸದಸ್ಯರಿಗೆ ಉನ್ನತ ಶಿಕ್ಷಣ ನೀಡುತ್ತದೆ. ಗ್ಯಾಂಬಿಯಾದ ಹಲವು ಉನ್ನತ ಸರ್ಕಾರಿ ಅಧಿಕಾರಿಗಳು ಈ ಸಂಸ್ಥೆಯಿಂದ ಕಲಿತವರಾಗಿದ್ದರು. ದಿವಂಗತರು ತಾಹಿರ್ ಅಹ್ಮದಿಯಾ ಸೀನಿಯರ್ ಸ್ಕೂಲಿನ ಪ್ರಾಂಶುಪಾಲರಾಗಿದ್ದರು, ಅದೇ ರೀತಿಯಲ್ಲಿ ನುಸ್ರತ್ ಸೀನಿಯರ್ ಸೆಕೆಂಡರಿ ಸ್ಕೂಲಿನ ಹೆಡ್ ಮಾಸ್ಟರ್ ಸಹ ಆಗಿದ್ದರು. ದೇಶ – ವಿದೇಶಗಳ ಜನರಿಗೆ ಶಿಕ್ಷಣ ನೀಡಿದ್ದರು. ಹೆಚ್ಚಾಗಿ ಶೈಕ್ಷಣಿಕ ಕ್ಷೇತ್ರಗಳಲ್ಲಿ ಅವರು ಪ್ರಸಿದ್ಧಿ ಪಡೆದಿದ್ದರು. ಜನರು ಅವರನ್ನು ಮೈ ಟೀಚರ್ ಎಂದು ಕರೆಯುತ್ತಿದ್ದರು. ದಿವಂಗತರು ಎರಡು ಪತ್ನಿಯರು, ಏಳು ಗಂಡು ಮಕ್ಕಳು ಮತ್ತು ಎರಡು ಹೆಣ್ಮಕ್ಕಳನ್ನು ಅಗಲಿದ್ದಾರೆ. ಅವರು ಓರ್ವ ಪತ್ನಿಯಾದ ಮಿಸ್ ಅಖೀಬ ಸಾಹಿಬ ಗ್ಯಾಂಬಿಯಾದ ಲಜ್ನಾ ಇಮಾಇಲ್ಲಾಹ್ ಸದರ್ ಆಗಿರುವರು. ಅವರು ಒಬ್ಬ ಮಗ ವಖ್‌ಫೆ ಝಿಂದಗಿಯಾಗಿದ್ದಾನೆ. ಜಾಮಿಅತುಲ್ ಮುಬಶ್ಶಿರೀನ್‌ನಿಂದ ತೇರ್ಗಡೆಯಾಗಿದ್ದಾನೆ. ಅದೇ ರೀತಿಯಲ್ಲಿ ಮತ್ತೊಬ್ಬ ಮಗ ಖುದ್ದಾಮುಲ್ ಅಹ್ಮದಿಯಾದಲ್ಲಿ ಸದರ್ ಖುದ್ದಾಮುಲ್ ಅಹ್ಮದಿಯಾ ಆಗಿದ್ದರು. ಅಮೇರಿಕದಲ್ಲಿ ಇಬ್ಬರು ಗಂಡು ಮಕ್ಕಳಿದ್ದಾರೆ. ಓರ್ವ ಮಗಳು ಯು.ಕೆ.ಯಲ್ಲಿ ಇದ್ದಾಳೆ. ಅಲ್ಲಾಹನು ದಿವಂಗತರೊಂದಿಗೆ ಕಾರುಣ್ಯ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ದಿವಂಗತರ ಅಭಿಲಾಷೆಯ ಪ್ರಕಾರ ಅವರ ಮಕ್ಕಳನ್ನು ಯಾವಾಗಲೂ ದೀನನೊಂದಿಗೆ ಸೇರಿಸಿ ಇರಿಸಲಿ.

ಗೇಂಬಿಯಾದ ಅಮೀರ್ ಸಾಹಿಬರು ಬರೆಯುತ್ತಾರೆ: ನಾನು ಸಹ ಕಿರಾಯಾ ಬಾಯಿಲೇಂಡ್ ಮಿಡಿಲ್ ಸ್ಕೂಲಿನಲ್ಲಿ ಅವರ ವಿದ್ಯಾರ್ಥಿಯಾಗಿದ್ದೆ. ಇಲ್ಲಿ ಎಲ್ಲ ಅಹ್ಮದಿಯಾ ವಿದ್ಯಾರ್ಥಿಗಳು ಇತರ ಮುಸ್ಲಿಮ್ ವಿದ್ಯಾರ್ಥಿಗಳೊಂದಿಗೆ ಸೇರಿಕೊಂಡು ಗುರುವಾರದಂದು ಇಸ್ಲಾಮಿಕ್ ಸ್ಟಡೀಸಿನ ಒಂದು ಕ್ಲಾಸನ್ನು ಶುರು ಮಾಡಿಸಿದ್ದರು. ದಿವಂಗತರು ಕ್ಲಾಸ್ ನಡೆಸುತ್ತಿದ್ದರು. ದಿವಂಗತರು ಜಮಾಅತಿನ ಹುದ್ದೇದಾರರರನ್ನು ಮತ್ತು ಜಮಾಅತಿನ ವ್ಯವಸ್ಥೆಯನ್ನು ಬಹಳ ಗೌರವಿಸುತ್ತಿದ್ದರು. ಅವರು ನನ್ನ ಶಿಕ್ಷಕರಾಗಿದ್ದರು ಕೂಡ, ನಾನು ಅಮೀರ್ ಆದಾಗ ಯಾವಾಗಲೂ ನನ್ನನ್ನು ಮತ್ತು ಇತರ ಹುದ್ದೇದಾರರನ್ನು ಸಂಪೂರ್ಣವಾಗಿ ಅನುಸರಿಸುತ್ತಿದ್ದರು. ಬಹಳ ನಿಷ್ಠಾವಂತ, ಪರಿಶ್ರಮಿ ಮತ್ತು ವಿಶಾಲ ಹೃದಯಿಯಾಗಿದ್ದರು. ಖಿಲಾಫತಿನೊಂದಿಗೆ ನಿಷ್ಠೆಯುಳ್ಳವರು ಮತ್ತು ವಿಧೇಯರಾಗಿದ್ದರು. ಖಿಲಾಫತಿನೊಂದಿಗೆ ಪ್ರೀತಿ ಮತ್ತು ಪ್ರೇಮದ ಸಂಬಂಧವಿರಿಸಿಕೊಂಡಿದ್ದರು. ಸದಾ ಜಮಾಅತ್ ಮತ್ತು ಖಿಲಾಫತಿನ ಸಂರಕ್ಷಣೆಯಲ್ಲಿ ಮುಂದಿದ್ದರು. ಅವರಿಗೆ ಉತ್ತಮ ಧಾರ್ಮಿಕ ಅರಿವು ಸಹ ಇತ್ತು. ಮರಾವೆಗಳೊಂದಿಗೆ ಮಾತನಾಡುತ್ತಿದ್ದರು. ಯುಕ್ತಿಯಿಂದ ಮಾತುಕತೆ ನಡೆಸುತ್ತಿದ್ದರು. ಹೊಸ ಟೆಕ್ನೋಲಜಿ ಮೂಲಕ ಮತ್ತು ವಿವಿಧ ರೀತಿಯಲ್ಲಿ ಹಝ್ರತ್ ಮಸೀಹ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಂದೇಶವನ್ನು ತಲುಪಿಸಲು ಪ್ರಯತ್ನಿಸುತ್ತಿದ್ದರು. ತಬ್ಲೀಗ್ ಕಾರ್ಯದಲ್ಲಿ ನಿರತರಾಗುತ್ತಿದ್ದರು.

ಎರಡನೇ ಜನಾಝ ಅಬ್ದುಲ್ ಜಲೀಲ್ ಖಾನ್ ಸಾಹಿಬರ ಮಗನಾದ ದಿವಂಗತ ನಯೀಮ್ ಅಹ್ಮದ್ ಖಾನ್ ಸಾಹಿಬ್ ನಾಇಬ್ ಅಮೀರ್ ಕರಾಚಿಯವರದ್ದಾಗಿದೆ. ಇವರು ಮೃತಪಟ್ಟು ಎರಡು ಮೂರು ತಿಂಗಳಾಯಿತು. ಎಪ್ರಿಲಿನ ಕೊನೆಯಲ್ಲಿ ವಫಾತ್ ಆಗಿದ್ದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರ ಕುಟುಂಬದಲ್ಲಿ ಮೊಟ್ಟಮೊದಲಿಗೆ ಸನ್ಮಾನ್ಯ ಅಖ್ತರ್ ಅಲಿ ಸಾಹಿಬರ ಮೂಲಕ ಅಹ್ಮದಿಯ್ಯತ್ ಪ್ರವೇಶಿತ್ತು. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾದ ಮೌಲವಿ ಹಸನ್ ಅಲಿ ಸಾಹಿಬ್ ಭಾಗಲ್ಪುರಿಯ ಮೂಲಕ ಬೈಅತ್ ಮಾಡಿದ್ದರು. ಮೌಲವಿ ಅಖ್ತರ್ ಅಲಿ ಸಾಹಿಬರು, ದಿವಂಗತರ ತಾಯಿಯ ಮಾವ ಮತ್ತು ತಂದೆಯ ಚಿಕ್ಕಪ್ಪರಾಗಿದ್ದರು. ದಿವಂಗತ ನಯೀಮ್ ಸಾಹಿಬರು ಬಿಹಾರಿನ ಪಟ್ನಾದಿಂದ ಹತ್ತನೇ ಕ್ಲಾಸ್ ಪಾಸಾಗಿದ್ದರು. 1948ರಲ್ಲಿ ಪಾಕಿಸ್ತಾನದ ನಿರ್ಮಾಣದ ನಂತರ ಲಾಹೋರಿಗೆ ಬಂದರು. ದಿಯಾಲ್ ಸಂಗ್ ಕಾಲೇಜಿನಲ್ಲಿ ಇಂಟರ್ ಮಾಡಿದರು. ಟಿ.ಐ. ಕಾಲೇಜ್ ಲಾಹೋರಿನಂದ ಎಂ.ಎಸ್.ಸಿ.ಮಾಡಿದರು. ಅನಂತರ ಲಂಡನಿಗೆ ಹೋದರು. 1959ರಲ್ಲಿ ಮರಳಿ ಬಂದು ಗ್ಯಾಸ್ ಕಂಪೆನಿಯಲ್ಲಿ ನೌಕರಿ ಮಾಡಿದರು. 1993ರಲ್ಲಿ ಸೀನಿಯರ್ ಮೇನೇಜರ್ ಹುದ್ದೆಯಿಂದ ನಿವೃತ್ತರಾದರು. ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಕರಾಚಿಯಲ್ಲಿ ನಾಇಬ್ ನಾಝಿರ್ ಸನತೋ ತಿಜಾರತ್ ಆಗಿ ಸೇವೆ ಮಾಡಲು ಆರಂಭಿಸಿದ್ದರು. ಅನಂತರ ಕರಾಚಿಯ ಲೋಕಲ್ ನಾಇಬ್ ಖಾಯಿದ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಆಗಿ ನಿಶ್ಚಯಿಸಲ್ಪಟ್ಟರು. ಅನಂತರ 1966ರಲ್ಲಿ ಕರಾಚಿಯ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಖಾಇದ್ ಆಗಿ ಚುನಾಯಿತರಾದರು. ನಾಲ್ಕು ವರ್ಷಗಳ ಕಾಲ ಈ ಸೇವೆಯನ್ನು ಸಲ್ಲಿಸಿದರು. ಅದರ ನಂತರ ಕರಾಚಿಯ ಅನ್ಸಾರುಲ್ಲಾಹ್ ಮಾರ್ಟನ್ ರೋಡಿನ ಝುಈಮ್ ಅಅ್ಲಾ ಆಗಿದ್ದರು. ಅನಂತರ ಕರಾಚಿಯ ನಾಝಿಮ್ ಅನ್ಸಾರುಲ್ಲಾಹ್ ಆಗಿದ್ದರು. 1997ರ ತನಕ ಈ ಸೇವೆಯಲ್ಲಿ ಇದ್ದರು. 1997ರಲ್ಲಿ ಕರಾಚಿ ಜಮಾಅತಿನ ವಖ್‌ಫೆ ಜದೀದ್ ಸೆಕ್ರಟರಿಯಾಗಿ ನಿಶ್ಚಯಿಸಲ್ಪಟ್ಟರು. 2019ರ ಈ ಹುದ್ದೆಯಲ್ಲಿ ಇದ್ದರು. ಸುದೀರ್ಘ ಕಾಲದ ವರೆಗೆ ಕರಾಚಿ ಜಮಾಅತಿನ ನಾಇಬ್ ಅಮೀರ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಫಝ್ಲ್ ಉಮರ್ ಫೌಂಡೇಶನಿನ ಡೈರೆಕ್ಟರ್ ಸಹ ಆಗಿದ್ದರು. ಇಂಟರ್‌ನೇಶನಲ್ ಎಸೋಸಿಯೇಶನ್ ಆಫ್ ಅಹ್ಮದಿಯಾ ಆರ್ಕಿಟೆಕ್ಟ್ಸ್ ಇಂಜಿನೀಯರ್ಸ್‌ನ ಮೊದಲ ಮಜ್ಲಿಸ್ ಆಮಿಲಾದಲ್ಲಿ ಆಡಿಟರ್ ಆಗಿ ಸೇವೆಗಳನ್ನು ಸಲ್ಲಿಸಿದರು. ಹಲವು ವರ್ಷ ಕರಾಚಿ ಚಾಪ್ಟರಿನ ಸದರ್ ಆಗಿದ್ದರು. 1970ರಲ್ಲಿ ಜಲ್ಸ ಸಾಲಾನಕ್ಕಾಗಿ ರೊಟ್ಟಿ ಮಾಡುವ ಮಿಶನ್‌ಗಳನ್ನು ಅಳವಡಿಸುವ ಯೋಜನೆ ಮಾಡಿ ಮಿಶನ್‌ಗಳನ್ನು ನಿರ್ಮಾಣ ಮಾಡಲು ಶುರು ಮಾಡಲಾದಾಗ ದಿವಂಗತರಿಗೆ ಇಂಜಿನಿಯರ್ ಎಂಬ ನೆಲೆಯಲ್ಲಿ ಈ ಕೆಲಸದಲ್ಲಿ ಭಾಗಿಯಾಗುವ ಗೌರವ ಲಭಿಸಿತು. ಹಲವು ವರ್ಷಗಳ ಹಿಂದೆ ಇವರ ಪತ್ನಿ ತೀರಿಹೋಗಿದ್ದರು. ಅವರ ಮಗಳಾದ ಅಮ್ಮಾರ ಸಾಹಿಬ ಬರೆಯುತ್ತಾಳೆ: ನಮ್ಮ ತಾಯಿಯ ಮರಣದ ನಂತರ ನಮ್ಮ ತಂದೆ ಒಬ್ಬ ದಯಾಳು ಅಪ್ಪ ಮಾತ್ರವಾಗಿರಲಿಲ್ಲ. ಬದಲಿಗೆ ಕಾಳಜಿ ವಹಿಸುವ ತಾಯಿಯ ಮತ್ತು ಸಹಾನುಭೂತಿಯುಳ್ಳ ಗೆಳೆಯನ ಪಾತ್ರವನ್ನು ಸಹ ಬಹಳ ಉತ್ತಮ ರೀತಿಯಲ್ಲಿ ವಹಿಸಿದ್ದರು. ಯಾವಾಗಲೂ ದೀನ್, ಖಿಲಾಫತಿನೊಂದಿಗೆ ನಿಷ್ಠೆ, ನಮಾಝ್ ಮತ್ತು ಜಮಾಅತಿನೊಂದಿಗೆ ಸಂಬಂಧವಿರಿಸಲು ಕಲಿಸುತ್ತಿದ್ದರು. ಅವರ ಅಳಿಯರಾದ ಡಾಕ್ಟರ್ ಗಫ್ಫಾರ್ ಸಾಹಿಬರ ಬರೆಯುತ್ತಾರೆ: ನನಗೆ ಅವರೊಂದಿಗೆ ಸಂಬಂಧ ಮೂವತ್ತು ವರ್ಷಗಳ ಹಿಂದೆ ಆಗಿತ್ತು. ಈ ಮೂವತ್ತು ವರ್ಷಗಳಲ್ಲಿ ದಿವಂಗತರನ್ನು ಬಹಳ ಸಮೀಪದಿಂದ ವೀಕ್ಷಿಸಲು ಸಂದರ್ಭ ಸಿಕ್ಕಿತ್ತು. ಅವರ ಸಾಮಿಪ್ಯ ಮತ್ತು ಸಂಗ ನನ್ನ ಜೀವಿತದಲ್ಲಿ ಬಹಳ ಸಕಾರಾತ್ಮಕ ಮತ್ತು ಉತ್ತಮ ಪ್ರಭಾವವನ್ನು ಬೀರಿತು. ದಿವಂಗತರು ಜೀವಿತ ರೀತಿ ಬಹಳ ಪರಿಶುದ್ಧವೂ ಸರಳ ಜೀವಿತದಿಂದ ಕೂಡಿದ್ದೂ ಆಗಿತ್ತು. ಇತರರಲ್ಲಿ ಅಸೂಯೆ ಉಂಟು ಮಾಡುವ ಮಟ್ಟದಷ್ಟು ಅವರು ಆರಾಧನೆಯಲ್ಲಿ ತಲ್ಲೀನರಾಗಿದ್ದರು. ನಿಯತವಾಗಿ ತಹಜ್ಜುದ್ ನಿರ್ವಹಿಸುತ್ತಿದ್ದರು. ಕೊನೆಯ ಸಮಯಗಳಲ್ಲಿ ಪಕ್ಷವಾತವಾದ ಕಾರಣ ಸ್ವತಃ ನಡೆಯಲು ಸಾಧ್ಯವಿಲ್ಲದಾಗಲೂ ತಮ್ಮ ಜೀವಿತ ಶೈಲಿಯಲ್ಲಿ ಅಲ್ಪ ಮಾತ್ರವೂ ವ್ಯತ್ಯಾಸ ಉಂಟಾಗಲು ಬಿಟ್ಟಿರಲಿಲ್ಲ. "ನನ್ನನ್ನು ನಿರ್ದಿಷ್ಟ ಸಮಯದಲ್ಲಿ ಎಬ್ಬಿಸಿ ಕುಳ್ಳಿರಿಸಬೇಕೆಂದು ಅವರ ಆರೈಕೆ ಮಾಡುತ್ತಿದ್ದ

ಮೇಲ್ ನರ್ಸ್‌ನೊಂದಿಗೆ ಅವರು ನಿರ್ದೇಶಿಸಿ ಇಟ್ಟಿದ್ದರು. ಹೀಗೆ ಅವರು ಕುರ್ಚಿಯಲ್ಲಿ ಕುಳಿತುಕೊಂಡು ತಮ್ಮ ದಿನವನ್ನು ತಹಜ್ಜುದ್ ನಮಾಝ್‌ನೊಂದಿಗೆ ಪ್ರಾರಂಭಿಸುತ್ತಿದ್ದರು. ಅಸಮರ್ಥರಾದ ಈ ಸ್ಥಿತಿಯಲ್ಲೂ ಧಾರ್ಮಿಕ ಕೆಲಸಗಳನ್ನು ಅವರು ಲೇಪ್‌ಟಾಪಿನಲ್ಲಿ ಮಾಡುತ್ತಿದ್ದರು.

ಜಮಾಅತಿನ ಮುಬಲ್ಲಿಗ್‌ರಾದ ನಸೀಂ ತಬಸ್ಸುಂ ಸಾಹಿಬರು ಹೇಳುತ್ತಾರೆ: ಸದಾ ಅವರ ತುಟಿಗಳಲ್ಲಿ ಮುಗುಳ್ನಗೆ ಇರುತ್ತಿತ್ತು. ರೋಗಾವಸ್ಥೆಯಲ್ಲೂ ಆಫಿಸಿಗೆ ಬರುತ್ತಿದ್ದರು. ವಖ್ಫೆ ಝಿಂದಗಿಯರನ್ನು ತುಂಬ ಪ್ರೀತಿಸುತ್ತಿದ್ದರು ಮತ್ತು ಅವರನ್ನು ತುಂಬ ಗೌರವಿಸುತ್ತಿದ್ದರು. ಅಲ್ಲಾಹನು ದಿವಂಗತರೊಂದಿಗೆ ಕಾರುಣ್ಯ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಅವರ ಒಳಿತುಗಳನ್ನು ಅವರ ಮಕ್ಕಳಿಗೆ ಜಾರಿಯಲ್ಲಿರಿಸಲು ಸೌಭಾಗ್ಯ ಸಿಗಲಿ. ಇವರ ಬಗ್ಗೆ ನಾರ್ವೇಯ ಝಿರತುಷ್ಟ ಮುನೀರ್ ಸಾಹಿಬರು ಬರೆಯುತ್ತಾರೆ: ಅವರು ದೀನಿನ ಸೇವೆಗಾಗಿ ಯಾವಾಗಲೂ ತಯಾರಿರುತ್ತಿದ್ದರು. ಖಿಲಾಫತಿನೊಂದಿಗೆ ಪ್ರೀತಿ, ನಿಷ್ಠೆ ಮತ್ತು ಪ್ರಾಮಾಣಿಕತೆಯ ಸಂಬಂಧವನ್ನು ಸದಾ ಇರಿಸಿದ್ದರು. ನಾನು ಜಿಲ್ಲಾ ಖಾಇದ್ ಎಂಬ ನೆಲೆಯಲ್ಲಿ ಸೇವೆ ಮಾಡುವ ಸೌಭಾಗ್ಯ ಪಡೆದಾಗ ಬಹಳ ಉತ್ತಮ ರೀತಿಯಲ್ಲಿ ನನಗೆ ಮಾರ್ಗದರ್ಶನ ನೀಡುತ್ತಿದ್ದರು. ಪ್ರತಿಯೊಬ್ಬ ಅಮೀರ್‌ರೊಂದಿಗೆ ಅನುಸರಣೆ ಮತ್ತು ಸೇವೆಯ ಉತ್ತಮ ಮಟ್ಟವನ್ನು ಅವರು ನೆಲೆನಿಲ್ಲಿಸಿದ್ದರು ಎಂದು ನಾನು ನೋಡಿದ್ದೇನೆ.

ಮುಂದಿನ ಜನಾಝಾ ದಿವಂಗತ ಠೇಕೇದಾರ್ ವಲಿ ಮುಹಮ್ಮದ್ ಸಾಹಿಬ್‌ರ ಪತ್ನಿಯಾದ ಬುಶ್ರಾ ಬೇಗಂ ಸಾಹಿಬರದ್ದಾಗಿದೆ. ಜುಲೈ 19ರಂದು, 74ನೇ ವಯಸ್ಸಿನಲ್ಲಿ ಹೃದಯಾಘಾತ ನಿಮಿತ್ತ ಜರ್ಮನಿಯಲ್ಲಿ ವಫಾತಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರ ತಾತರಾದ ಮಿಯಾ ನಿಝಾಮುದ್ದೀನ್ ಸಾಹಿಬ್ ಆಫ್ ನಾಭಾರವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿಯಾಗಿದ್ದರು. ತಹಜ್ಜುದ್ ನಮಾಝ್ ಮತ್ತು ಐದು ಹೊತ್ತಿನ ನಮಾಝ್ ನಿಯತವಾಗಿ ನಿರ್ವಹಿಸುತ್ತಿದ್ದರು. ನಿರ್ಗತಿಕರಿಗೆ ಸಹಾಯ ಮಾಡುವವರಾಗಿದ್ದರು. ಧನತ್ಯಾಗದಲ್ಲಿ ಮುಂದಿದ್ದರು. ಒಳ್ಳೆಯ ಸ್ವಭಾವದ ಮತ್ತು ನಿಷ್ಠಾವಂತ ಸ್ತ್ರೀಯಾಗಿದ್ದರು. ಖಿಲಾಫತ್‌ನೊಂದಿಗೆ ಅಪರಿಮಿತವಾದ ಪ್ರೇಮ ಮತ್ತು ವಿಶ್ವಾಸವಿತ್ತು. ಚಿಕ್ಕವರಾಗಿದ್ದಾಗಲೇ ಕಣ್ಣಿನ ದೃಷ್ಟಿ ಕಡಿಮೆಯಿದ್ದ ಕಾರಣ ನಿಯತವಾಗಿ ಪವಿತ್ರ ಖುರ್‌ಆನ್ ಪಾರಾಯಣ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಮದುವೆಯ ನಂತರ ತಮ್ಮ ಮಕ್ಕಳ ಸಹಾಯದಿಂದ ಪವಿತ್ರ ಖುರ್‌ಆನಿನ ಕೆಲವು ಜುಝ್ಹೂಗಳನ್ನು ಕಂಠಪಾಠ ಮಾಡಿದ್ದರು. ಎಂ.ಟಿ.ಎ.ದಲ್ಲಿ ಪವಿತ್ರ ಖುರ್‌ಆನ್ ಪಾರಾಯಣ, ನನ್ನ ಖುತ್‌ಬಗಳು ಮತ್ತಿತರ ಕಾರ್ಯಕ್ರಮಗಳನ್ನು ನಿಯತವಾಗಿ ಕೇಳುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯೂ ಆಗಿದ್ದರು. ಇವರು ನಾಲ್ಕು ಗಂಡು ಮಕ್ಕಳನ್ನು ಮತ್ತು ಎರಡು ಹೆಣ್ಮಕ್ಕಳನ್ನು ಅಗಲಿರುವರು. ಇವರ ಒಬ್ಬ ಮಗನಾದ ಶಫೀಖುರ್ರಹ್ಮಾನ್ ಸಾಹಿಬರು ನ್ಯೂಝಿಲೇಂಡ್ ಜಮಾಅತಿನ ಮುಬಲ್ಲಿಗ್ ಮತ್ತು ಮಿಶನರಿ ಇಂಚಾರ್ಜ್ ಆಗಿರುವರು. ಮತ್ತೊಬ್ಬ ಮಗ ಅತೀಖುರ್ರಹ್ಮಾನ್ ಸಾಹಿಬರು ವಖ್ಫ್ ಮಾಡಿ ಈಗ ನಮ್ಮ ಪಿ.ಎಸ್. ಆಫಿಸಿನ ರೆಕಾರ್ಡ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ. ಮಗನಾದ ಮಿಶನರಿ ಇಂಚಾರ್ಜ್ ಶಫೀಖುರ್ರಹ್ಮಾನ್ ಸಾಹಿಬರಿಗೆ ತನ್ನ ತಾಯಿಯ ಜನಾಝದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಅವರನ್ನು ಇಲ್ಲಿ ಯು.ಕೆ.ಯಲ್ಲಿ ದಫನ್ ಮಾಡಲಾಗಿತ್ತು. ಅಲ್ಲಾಹನು ಆ ಮಗನಗೂ ಸಮಾಧಾನ ಮತ್ತು ಸಹನೆ ದಯಪಾಲಿಸಲಿ. ಅಲ್ಲಾಹನು ದಿವಂಗತರೊಂದಿಗೆ ಕಾರುಣ್ಯ ಮತ್ತು ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ಅವರ ಮಕ್ಕಳನ್ನು ಅವರ ದುಆಗಳ ವಾರಸುದಾರರನ್ನಾಗಿ ಮಾಡಲಿ. ಜುಮಾ ನಮಾಝ್ ನಂತರ ಇವರ ಜನಾಝವನ್ನೂ ನಿರ್ವಹಿಸುವೆನು. ಇನ್‌ಶಾ ಅಲ್ಲಾಹ್.

*************

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಇದೆ. ಆದರಿಂದ ಅವರು ಬೌದ್ಧಿಕ ವಿಚಾರಗಳನ್ನು ತಿಳಿದುಕೊಳ್ಳಬಹುದು. ಅದೇ ರೀತಿ ಅವರಲ್ಲಿ ಒಂದು ಶಕ್ತಿ ಪ್ರೀತಿಯೂ ಇದೆ ಅದನ್ನು ಅದು ಒಳಗೊಂಡಿದೆ. ಅದರಿಂದ ಅವರು ಅಲ್ಲಾಹನೆಡೆ ಬಾಗುತ್ತಾರೆ. ಹೀಗಿರುವಾಗ ಇವೆಲ್ಲ ಶಕ್ತಿಗಳು ತನ್ನಷ್ಟಕ್ಕೆ ಅಸ್ತಿತ್ವ ಪಡೆದಿದೆ ಎಂದು ನಂಬುವುದಾದರೆ ಅದರಲ್ಲಿ ಪರಮೇಶ್ವರನ ಅತಿಯಾದ ಅಪಮಾನವಿದೆ. ಅನ್ಯಥಾ ಹೇಳಬಹುದಾಗಿದೆ ಯಾವುದು ಉತ್ತಮ ಮತ್ತು ಉನ್ನತಮಯವಾಗಿದ್ದವು ಅವು ತನ್ನಷ್ಟಕ್ಕೆ ಅಗಿವೆ ಮತ್ತು ಯಾವುದು ಕೀಳು ಹಾಗೂ ಕೆಟ್ಟದಾಗಿದೆಯೊ ಅದನ್ನು ಪರಮೇಶ್ವರನು ನಿರ್ವಹಿಸಿದನು. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–140)

**ಪ್ರತಿಯೊಂದು ಆತ್ಮವು ಪರಮೇಶ್ವರನ ಆರಾಧನೆ ಮೂಲಕ ಉತ್ತರ ಕೊಡಬಹುದಾಗಿದೆ.**

ಪ್ರತಿಯೊಂದು ಆತ್ಮ ಪರಮೇಶ್ವರನಿಗೆ ಉತ್ತರ ಕೊಡಬಹುದಾಗಿದೆ– "ಯಾವುದೇ ಸ್ಥಿತಿಯಲ್ಲಿಯೂ ನೀನು ನನ್ನನ್ನು ಸೃಷ್ಟಿಸಿಯೇ ಇಲ್ಲ, ನನ್ನ ಶಕ್ತಿಗಳನ್ನು ಬಲಗಳನ್ನು ಮತ್ತು ಸಾಮರ್ಥ್ಯಗಳನ್ನು ನೀನು ನೀಡಲೇ ಇಲ್ಲ" ಅಂತಾದರೆ ಯಾವ ಮುಖದಿಂದ ನಮ್ಮಿಂದ ಆರಾಧನೆ ಬಯಸುವೆ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–140)

**ಪರಮೇಶ್ವರನಿಗೆ ಆತ್ಮಗಳ ಗುಟ್ಟು ಮತ್ತು ಸ್ಥಿತಿಯ ಪೂರ್ಣ ಜ್ಞಾನವಿಲ್ಲ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಹಿಂದುಗಳ ಪರಮೇಶ್ವರನು ಆತ್ಮಗಳನ್ನು ಸೃಷ್ಟಿಸುವುದಿಲ್ಲ. ಅವನು ಈ ದುರ್ಬಲತೆ ವಿವಶತೆಯ ಕಾರಣಗಳಿಂದಾಗಿಯೇ ಅವನ ಆತ್ಮಗಳ ಹುಟ್ಟು ಗುಣಗಳ ಬಗ್ಗೆ ಏನೂ ಜ್ಞಾನ ಹೊಂದಿಲ್ಲ. ಯಾವುದೇ ಒಂದು ವಸ್ತುವನ್ನು ಸೃಷ್ಟಿಸುವುದಿಲ್ಲ ಆ ವಸ್ತುವಿನ ಎಲ್ಲ ಗುಣಗಳನ್ನು ಅರಿತುಕೊಳ್ಳುವುದು ಅನಿವಾರ್ಯವಾಗಿದೆ. ಆದರೆ ಹೆಚ್ಚಿನ ವಿಚಾರ ನಾವು ನೋಡಿದರೆ ತಿಳಿಯಬಹುದು, ಎಲ್ಲ ಬಲ್ಲವನಾಗಿರುವವನು ಮತ್ತು ಸೃಷ್ಟಿಕರ್ತನಾಗುವನು ವಾಸ್ತವದಲ್ಲಿ ಒಂದೇ ವಿಷಯವಾಗಿದೆ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–230–231)

**ಅಲ್ಪಜ್ಞಾನದ ಕಾರಣ ಪರಮೇಶ್ವರನು ಆತ್ಮಗಳನ್ನು ಮತ್ತು ದೇಹಗಳನ್ನು ಜೋಡಿಸಲು ಅನರ್ಹನು**

ಆರ್ಯರು ಹೇಳುತ್ತಾರೆ: ಆತ್ಮಗಳನ್ನು ದೇಹಗಳನ್ನು ಜೋಡಿಸುವುದೇ ಪರಮೇಶ್ವರನಿಗೆ ಸಾಕಾಗಿದೆ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಹೇಳುತ್ತೇನೆ ಇಂತಹ ಅಸಮರ್ಥ ಪರಮೇಶ್ವರನ ಆರಾದನೆ ಮಾಡಲು ಅನರ್ಹ ಏಕೆಂದರೆ ಅವನಿಗೆ ಆತ್ಮಗಳ ಬಗ್ಗೆ ಪೂರ್ಣ ಜ್ಞಾನ ಹೊಂದಿದ್ದಾಗಿದ್ದಾರೆ ಅವನು ಸೃಷ್ಟಿಯು ಮಾಡುತ್ತಿದ್ದ ಏಕೆಂದರೆ ಒಂದು ವಸ್ತುವಿನ ಬಗ್ಗೆ ಪೂರ್ಣ ಜ್ಞಾನ ಹೊಂದಿದವನು ಮಾಡುವ ಕೆಲಸದಲ್ಲಿಯೂ ಹೀಗೆ ಸಮರ್ಥನಾಗಬಲ್ಲ ಯಾರ ಬಳಿಯಾದರೂ ಪುರಾವೆ ಇದ್ದರೆ ತೋರಿಸಲಿ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–263)

**ಅಪೂರ್ಣ ಪರಮೇಶ್ವರನು ಸೀಮಿತ ಮುಕ್ತಿ ಕೊಡುವನು ಪೂರ್ಣ ಮುಕ್ತಿ ಕೊಡುವುದು ಅವನ ವಶ ಹಾಗೂ ಶಕ್ತಿಯಲ್ಲಿಲ್ಲ**

ಆರ್ಯರ ನಂಬಿಕೆ ಪ್ರಕಾರ ಆತ್ಮಗಳು, ದೇಹಗಳು ಮತ್ತು ಬ್ರಹ್ಮಾಂಡದ ಅಣು ಸ್ವಯಂ ಅಸ್ತಿತ್ವ ಹೊಂದಿದೆ. ಪರಮೇಶ್ವರನು ಏನೂ ಸೃಷ್ಟಿಸಲಿಲ್ಲ, ಸೃಷ್ಟಿಸಲು ಸಾಧ್ಯವೂ ಇಲ್ಲ. ಆದುದರಿಂದ ಪರಮೇಶ್ವರನು ಶಾಶ್ವತವಾದ ಮುಕ್ತಿ ನೀಡುವುದಾದರೆ, ಒಂದು ದಿನ ಪರಮೇಶ್ವರನ ಕೈಯಿಂದ ಎಲ್ಲ ಆತ್ಮಗಳು ಮುಕ್ತಿ ಪಡೆದು ಹೊರಟು ಹೋಗುವುವು. ಹೀಗೆ ಪರಮೇಶ್ವರನು ಹೊಸ ಆತ್ಮಗಳನ್ನು ಸೃಷ್ಟಿಸಲು ಸಾಧ್ಯವಿಲ್ಲದ್ದರಿಂದ ಅವನು ಎಲ್ಲರಿಗೂ ಮುಕ್ತಿ ನೀಡಲು ಸಾಧ್ಯವಿಲ್ಲದವನಾಗಿದ್ದಾನೆ. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಸೃಷ್ಟಿಕರ್ತನಲ್ಲದ ಕಾರಣ, ಅಲ್ಪ ಸಾಮರ್ಥ್ಯವುಳ್ಳವನಾಗಿದ್ದರಿಂದ ಮುಕ್ತಿ ನೀಡದೆ ಅವನು ಮುಕ್ತಿಯನ್ನು ಸೀಮಿತಗೊಳಿಸಿದ್ದಾನೆ. ಅಂದರೆ ದುರಾದೃಷ್ಟವಾಗಿ ಜನರಿಗೆ ಒಂದು ಅಪೂರ್ಣ ದೇವನು ಲಭಿಸಿದ್ದಾನೆ. ಅವನು ಶಾಶ್ವತ ಮುಕ್ತಿ ನೀಡಲು ಸಮರ್ಥನಾಗಿರಲಿಲ್ಲ. ಆದುದರಿಂದ ಅವನ ದೌರ್ಭಾಗ್ಯವಂತ ದಾಸರು ಶಾಶ್ವತ ಮುಕ್ತಿಯಿಂದ ವಂಚಿತರಾದರು. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–148)

**ಆತ್ಮ ಮತ್ತು ದೇಹಗಳನ್ನು ಸೃಷ್ಟಿಗಳಲ್ಲ ಎಂದು ನಂಬುವುದರಿಂದ ಅಲ್ಲಾಹನ ಪರಿಪೂರ್ಣ ಗುಣವಿಶೇಷಗಳಿಗೆ ಧಕ್ಕೆ ಬರುತ್ತದೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನು ಪರಿಪೂರ್ಣ ಅನುಗ್ರಹ ಹಾಗೂ ಪ್ರಕಾಶಗಳ ಮೂಲವಾಗಿದ್ದಾನೆ. ಎಲ್ಲ ವಸ್ತುಗಳನ್ನು ಅವನೇ ನೆಲೆ ನಿಲ್ಲುವಂತೆ ಮಾಡಿರುವನು, ಎಲ್ಲಗಳ ಅಗರ, ಎಲ್ಲ ಶ್ರೇಷ್ಠತೆಗಳ ಅಗರ, ವಿವಶತೆ ಮತ್ತು ನ್ಯೂನ್ಯತೆಯಿಂದ ಮುಕ್ತ ಆದರೆ ನೀವು ಯೋಚಿಸಿ ನೋಡಿ ಆತ್ಮ ಮತ್ತು ದೇಹಗಳು ಸೃಷ್ಟಿ ಅಲ್ಲವಾದರೆ, ಸ್ವಯಂ ಅಸ್ತಿತ್ವ ಹೊಂದಿದ್ದಾದರೆ ದೈವಿಕ ಗುಣಗಳಲ್ಲಿ ಯಾವುದೋ ನಿಲ್ಲದು. ಮತ್ತು ಎಂತಹ ಕಠಿಣ ದುಃಖ ಆತನ ದೇವತ್ವದಲ್ಲಿ ಉಂಟಾಗುತ್ತದೆ ಎಂದರೆ ಅದರಲ್ಲಿ ಏನೂ ಬಾಕಿ ಉಳಿಯುವುದಿಲ್ಲ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯೀನ್, ಸಂಪುಟ–2, ಪುಟ–144)

**ಪರಿಪಾಲಕನೂ ಅಲ್ಲ, ಸೃಷ್ಟಿ ಕರ್ತನೂ ಅಲ್ಲ, ಮಾಲೀಕನೂ ಅಲ್ಲ, ಇದೆಂತಹ ಪರಮೇಶ್ವರ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಎಲ್ಲ ಆತ್ಮಗಳು ಮತ್ತು ದೇಹಗಳು ತನ್ನಂತಾನೆ ಪರಮೇಶ್ವರನ ತರಹ ಅನಾದಿ ಮತ್ತು ಪುರಾತನ ಆಗಿದೆ ಎಂದಾದರೆ ತನ್ನ ಅಸ್ತಿತ್ವದಲ್ಲಿ ತಾನೇ ದೇವನಾದರೆ ಪರಮೇಶ್ವರನ ದಾವೆಯಾದ, ನಾನು ಈ ಎಲ್ಲ ವಸ್ತುಗಳ ಪರಿಪಾಲಕನಾಗಿದ್ದೇನೆ ಎಂಬುದು ಅರ್ಥಹೀನವಾಗುತ್ತದೆ. ಉದಾಹರಣೆಗೆ ಯಾವುದಾದರು ಮಗು ಪೂರ್ಣಗೊಂಡು ಆಕಾಶದಿಂದ ಉದುರಿದರೆ ಅಥವಾ ನೆಲದ ಮಣ್ಣಿನಿಂದಲೇ ಸ್ವಯಂ ಜನ್ಮ ತಾಳಿದರೆ ಯಾವ ಮಹಿಳೆಗೂ ಈ ಮಗು ನನ್ನದು ಎಂದು ಹೇಳಲು ಹಾಗೂ ದಾವೆ ಹೂಡುವ ಹಕ್ಕಿರುವುದಿಲ್ಲ. ಅದರ ಬದಲು ಅವಳ ಉದರದಿಂದ ಆ ಮಗು ಹುಟ್ಟಿದ್ದರೆ ಅದು ಅವಳದ್ದಾಗಿರುವುದು. ಆದುದರಿಂದ

ಯಾವುದನ್ನು ಪರಮೇಶ್ವರನು ಸೃಷ್ಟಿಸಿರುವನೋ ಅದೇ ಅವನದ್ದಾಗಿರುವುದು ಮತ್ತು ಯಾವುದು ಅವನಿಂದ ಸೃಷ್ಟಿಸಲ್ಪಟ್ಟವಲ್ಲ ಅದು ಎಂದಿಗೂ ಅವನದ್ದೆಂದು ಹೇಳಲು ಸಾಧ್ಯವಿಲ್ಲ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯಿನ್, ಸಂಪುಟ–2, ಪುಟ–146)

**ಒಂದು ಪಾಪದ ಬದಲು ಎರಡು ಲಕ್ಷ ಜನ್ಮ ತಾಳುವಿಕೆಯ ಶಿಕ್ಷೆ. ಅಲ್ಲಾಹ್–ಅಲ್ಲಾಹ್!!**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಒಂದು ವೇಳೆ ಹಿಂದುಗಳ ಪರಮೇಶ್ವರನು ಒಂದು ಪಾಪದ ಬದಲಿಗೆ ಒಂದು ಲಕ್ಷ ಜನ್ಮ ತಾಳುವಿಕೆಯ ಶಿಕ್ಷೆ ನಿಗದಿಪಡಿಸಿದರೂ ಈ ಅನನ್ಯ ಶೃಂಖಲೆಯಿಂದ ಬೇರ್ಪಡುವುದು ಕಷ್ಟಸಾಧ್ಯ. ಆದರೆ ಒಂದು ಪಾಪದ ಬದಲು ಎರಡು ಲಕ್ಷದಷ್ಟು ಜನ್ಮತಾಳುವಿಕೆಯ ಶಿಕ್ಷೆ ಲಭಿಸಿದರೆ ಏನೆನ್ನಬೇಕು. ಮತ್ತು ಈ ಪಾಪದಿಂದ ಮುಕ್ತಿ ಸಿಗುತ್ತಿದ್ದಂತೆಯೇ ಬೇರೆ ಪಾಪದ ಶಿಕ್ಷೆ ಪ್ರಾರಂಭ, ಒಂದೆಡೆ ದಾಸನು ಶಿಕ್ಷೆ ಅನುಭವಿಸುತ್ತಾ ಹೋಗುವುದು, ಇನ್ನೊಂದೆಡೆ ಹೊಸ ಹೊಸ ಪಾಪಗಳು ಅವನಿಗೆ ಆವರಿಸುತ್ತಿರುತ್ತದೆ ಮತ್ತು ಕ್ಷಣ ಕ್ಷಣಕ್ಕೂ ಪಾಪಗಳು ಸಂಗ್ರಹವಾಗುತ್ತಿರುತ್ತದೆ. ಆದ್ದರಿಂದ ಪಾಪದ ವಾಸ್ತವ ಹೀಗಿರುವಾಗ ಅದರಿಂದ ಮುಕ್ತಿ ಪಡೆಯುವುದು ಬೌದ್ಧಿಕವಾಗಿ ಕಷ್ಟವಾಗಿದೆ. ಶಾಶ್ವತವಾದ ಮುಕ್ತಿ ಪಡೆಯಲು ಯಾವುದೇ ರೀತಿಯ ಪಾಪ ಉಳಿದಿರಬಾರದು ಮತ್ತು ಯಾವ ಜೀವಿಯಿಂದ ತಪ್ಪಾಗಿರಬಾರದು ಎಂದಾದರೆ ಆರ್ಯರಲ್ಲಿ ಮುಕ್ತಿ ಹೊಂದುವ ಯಾವ ಲಕ್ಷಣವೂ ಸಹ ಕಂಡುಬರುವುದಿಲ್ಲ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯಿನ್, ಸಂಪುಟ–2, ಪುಟ–154)

**ನಾವು ಆತ್ಮಗಳು ಸೃಷ್ಟಿ ಎಂದು ಸಾಬೀತು ಮಾಡುತ್ತೇವೆ ಮಾಸ್ಟರ್ ಸಾಹಿಬ್ ಸೃಷ್ಟಿ ಅಲ್ಲ ಎಂದು ಸಾಬೀತುಗೊಳಿಸಲಿ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಇಲ್ಲಿ ಇದು ಸ್ಪಷ್ಟತೆ ಇರಲಿ, ಆತ್ಮಗಳ ಘಟನೆ ಮತ್ತು ಸೃಷ್ಟಿಯಾಗಿರುವುದರ ಬಗ್ಗೆ ಪವಿತ್ರ ಖುರ್‌ಆನಿನಲ್ಲಿ ದೊಡ್ಡ ದೊಡ್ಡ ಶಕ್ತಿಯುತ ಮತ್ತು ನಿರ್ಣಾಯಕ ಪುರಾವೆಗಳೊಂದಿಗೆ ವಿವರಗಳಿವೆ. ಮೊದಲನೆಯದಾಗಿ ಈ ಮಾತು ಸ್ಪಷ್ಟವಾಗಿ ಸಾಬೀತುಗೊಂಡಿದೆ, ಎಲ್ಲ ಆತ್ಮಗಳೂ ಸದಾ ಯಾವುದೇ ಸ್ಥಿತಿಗಳಲ್ಲಿಯೂ ಅಲ್ಲಾಹನ ಅಡಿಯಲ್ಲಿ ಮತ್ತು ಅವನ ಆಜ್ಞೆಯ ಅಧೀನದಕ್ಕೆ ಒಳಪಟ್ಟಿವೆ. ಆದುದರಿಂದ ಇದು ಆತ್ಮಗಳು ಸೃಷ್ಟಿಯಾಗಿರುವುದಕ್ಕೆ ಒಂದು ಪುರಾವೆ ಆಗಿದೆ. ಎರಡನೆಯದಾಗಿ ಸ್ಪಷ್ಟವಿರುವುದೇನೆಂದರೆ ಎಲ್ಲ ಆತ್ಮಗಳು ವಿಶೇಷ ರೀತಿಯ ಸಾಮರ್ಥ್ಯಗಳಲ್ಲಿ ಮತ್ತು ಶಕ್ತಿಗಳಲ್ಲಿ ಸೀಮಿತಗೊಂಡಿವೆ. ಆದಂ ಸಂತತಿಯ ವಿಭಿನ್ನ ರೀತಿಯ ಆಧ್ಯಾತ್ಮಿಕ ಭಿನ್ನತೆಗಳು ಮತ್ತು ಸಾಮರ್ಥ್ಯಗಳಿಂದ ಇದನ್ನು ತಿಳಿಯಬಹುದಾಗಿದೆ. ಈ ಪರಿಮಿತವು ಒಂದು ಸೃಷ್ಟಿಕರ್ತನನ್ನು ಬಯಸುತ್ತದೆ. ಅದರಿಂದ ಸೃಷ್ಟಿ ಎಂದು ಸಾಬೀತುಗೊಂಡು, ಆತ್ಮಗಳ ಸೃಷ್ಟಿಕರ್ತನೊಬ್ಬನಿದ್ದಾನೆ ಎಂದು ಸಾಬೀತಾಗುತ್ತದೆ. ಮೂರನೆಯದಾಗಿ ಈ ವಿಷಯ ಸಹ ಯಾವ ಪುರಾವೆಗೂ ಅಡ್ಡಿಯಿಲ್ಲ, ಯಾವನು ಪರಿಪೂರ್ಣ ಸಾಮರ್ಥ್ಯವುಳ್ಳವನು ಎಲ್ಲಾ ಬಲ್ಲವನು, ಅನುಗ್ರಹದಾತ ಆಗಿರುವನು ಅವನು ಈ ಸೃಷ್ಟಿಯನ್ನು ಸಾಬಿತುಗೊಳಿಸುತ್ತಾನೆ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯಿನ್, ಸಂಪುಟ–2, ಪುಟ–167) ಸ್ಥಳದ ಅಭಾವದಿಂದಾಗಿ ನಾವು ಕೇವಲ ಮೂರು ಪುರಾವೆಗಳನ್ನು ಪ್ರಸ್ತುತಪಡಿಸುತ್ತಿದ್ದೇವೆ. ಕೊನೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಮಾಸ್ಟರ್ ಸಾಹೇಬರು ವೇದವು ಸಹ ದೈವಿಕ ಜ್ಞಾನ ಹೊಂದಿದ್ದವುಗಳಾಗಿವೆ ಎನ್ನುವುದಾದರೆ ಅವರು ಅನಿವಾರ್ಯವಾಗಿ ಖುರ್‌ಆನಿನ ಬದಲಾಗಿ ವೇದಗಳಿಂದಲೂ ಬೌದ್ಧಿಕ ಸಾಕ್ಷಿಗಳು ಒದಗಿಸಿ ಕೊಡಲಿ. ಅದರಲ್ಲಿ ಆತ್ಮಗಳಿಗೆ ಸೃಷ್ಟಿಕರ್ತನು ಇಲ್ಲ ಎಂದು ಸಾಬೀತಾಗಬೇಕು. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯಿನ್, ಸಂಪುಟ–2, ಪುಟ–170)

**ಯಥೇಚ್ಛ ಪಾಪಗಳು ವರ್ಷಾ ಋತುವಿನಲ್ಲಿ**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:

ವೇದಗಳ ನಿಯಮದನ್ವಯ ಯಾವ ಜನರು ಅತ್ಯಂತ ನಿಕೃಷ್ಟ ಪಾಪಗಳನ್ನು ಮಾಡುತ್ತಾರೆ, ಅವರು ಕ್ರಿಮಿ ಕೀಟ ಮತ್ತು ಮಣ್ಣಿನ ಹುಳುಗಳಾಗುತ್ತಾರೆ. ಅಲ್ಪ ಪ್ರಮಾಣದ ಪಾಪವಿದ್ದವರಿಗೆ ಮಾತ್ರ ಮನುಷ್ಯನ ಆತ್ಮ ದೊರೆಯುತ್ತದೆ. ಆದರೆ ಈ ಮಾತು ಸ್ಪಷ್ಟವಾಗಿ ಮಿಥ್ಯ ಎಂದು ತಿಳಿದುಬರುತ್ತದೆ. ಏಕೆಂದರೆ ದೈವಿಕ ನಿಯಮಗಳನ್ವಯ ಸ್ಪಷ್ಟವಾಗಿ ಕಾಣಲು ಸಿಗುವುದೇನೆಂದರೆ ಹೆಚ್ಚಿನ ಕ್ರಿಮಿ ಕೀಟಗಳು, ಕಪ್ಪೆಗಳು, ಮತ್ತು ಸಣ್ಣ ಸಣ್ಣ ರೆಕ್ಕೆಯುಳ್ಳ ಹಾಗೂ ಇತರ ಪ್ರಾಣಿಗಳು ವರ್ಷಾ ಋತುವಿನಲ್ಲಿಯೇ ಹುಟ್ಟುತ್ತವೆ. ಹೀಗಾದರೆ ನಾವು ಹೀಗೆ ಭಾವಿಸಬಹುದೇ, ಅಲ್ಲಾಹನ ಸೃಷ್ಟಿಗಳು ಯಾವಾಗಲೂ ವರ್ಷ ಋತುವಿನಲ್ಲಿಯೇ ಹೆಚ್ಚು ಪಾಪಗಳು ಮಾಡುತ್ತವೆ ಇತರ ದಿನಗಳಲ್ಲಿ ಅಲ್ಲ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯಿನ್, ಸಂಪುಟ–2, ಪುಟ–184)

**ಮನುಷ್ಯನು ಕಿವಿ ಮತ್ತು ಬಾಯಿಯಿಂದಲೂ ಹುಟ್ಟ ಬಹುದೇ?**

ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲಯಹಿಸ್ಸಲಾಮ್ ಹೇಳುತ್ತಾರೆ: ದಯಾನಂದ್ ಸಾಹಿಬರು ಹೇಳುತ್ತಾರೆ– ವೇದದನ್ವಯ ಮಹಿಳೆಯು ಗರ್ಭಧಾರಣೆ ಮಾಡಲು ಕೇವಲ ವೀರ್ಯ ಕಾರಣವಾಗಿರುತ್ತದೆ. ಆತ್ಮವು ಮಂಜಿನಂತೆ ಯಾವುದೋ ಗಿಡಗಂಟಿಯ ಮೇಲೆ ಬೀದ್ದಿರುತ್ತದೆ ಅದನ್ನು ಸ್ತ್ರೀಯು ತಿಂದು ಗರ್ಭಧರಿಸುತ್ತಾಳೆ. ನೋಡಿರಿ ಇದು ವೈದ್ಯಕೀಯ ರೀತಿಗೆ ಎಷ್ಟೊಂದು ವಿರುದ್ಧವಾಗಿದೆ. ಹಾಗೆಯೇ ವೇದದಲ್ಲಿ ಹೀಗೂ ಬರೆಯಲಾಗಿದೆ. ಇಂದ್ರನು ಒಬ್ಬ ಋಷಿಯ ಮಗಳನ್ನು ಗರ್ಭಧರಿಸಿದನು ಅಥವಾ ಸ್ವಯಂ ಅವಳ ಉದರದಿಂದ ಹುಟ್ಟಿದನು. ನಿಮ್ಮ ಪೂರ್ವಜರು ಇದು ಸಹ ಬರೆದು ಹೋಗಿದ್ದಾರೆ– ಕೆಲವು ಋಷಿಗಳು ಕಿವಿಯಿಂದ, ಕೆಲವರು ಬಾಯಿಯಿಂದ, ಕೆಲವರು ಇತರ ಪ್ರಾಣಿಗಳ ಹೊಟ್ಟೆಯಿಂದ ಹುಟ್ಟುತ್ತಾರೆ. (ಸುರ್ಮ ಚಶ್ಮ ಆರ್ಯ, ರೂಹಾನಿ ಖಝಾಯಿನ್, ಸಂಪುಟ–2, ಪುಟ–184)

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆರ್ಯರ ವಿಶ್ವಾಸಗಳ ವಿರುದ್ಧ ಏನೆಲ್ಲ ಪುರಾವೆಗಳನ್ನು ಒದಗಿಸಿದ್ದಾರೆ ಅವು ತುಂಬ ಮನೋಹರ ಹಾಗೂ ಅದ್ವಿತೀಯವಾಗಿವೆ. ಅವರು ಎಲ್ಲ ಸಾಕ್ಷಿಗಳನ್ನು ವಿವರವಾಗಿ ವಿವಿಧ ಮಜಲುಗಳಿಂದ ಮತ್ತು ವಿವಿಧ ರೀತಿಯಲ್ಲಿ ವಿವರಿಸಿರುವರು. ನಾವು ಎಲ್ಲ ಪುಟಗಳನ್ನು ಅವರದ್ದೇ ಪದಗಳಲ್ಲಿ ಓದುಗರಿಗೆ ಬರೆದಿದ್ದೇವೆ. ಕೆಲವು ಸಾಕ್ಷಿಗಳು ಇನ್ನು ಸಹ ಬಾಕಿ ಇವೆ. ಅದು ಇನ್‌ಶಾಅಲ್ಲಾಹ್ ಮುಂದಿನ ಸಂಚಿಕೆಯಲ್ಲಿ ಪ್ರಸ್ತುತಪಡಿಸುವೆವು. **(ಮನ್‌ಸೂರ್ ಅಹ್ಮದ್ ಮಸ್‌ರೂರ್)**

---

***(ಪುಟ ಸಂಖ್ಯೆ 01ರ ಉಳಿದ ಭಾಗ)***

ಈ ವಚನದಿಂದ ತಿಳಿದು ಬರುವುದೇನೆಂದರೆ ಅಲ್ಲಾಹನ ಎಲ್ಲಾ ಪ್ರವಾದಿಗಳ ಮೇಳೆ ವಿಶ್ವಾಸವುಳ್ಳವನೆ ಮುಸ್ಲಿಮನಾಗಿರುವನು. ಅವರ ಪೈಕಿ ಯಾರ ಮಧ್ಯೆಯು ಭೇದಭಾವ ಮಾಡಬಾರದು, ತಿಳಿದಿರುವ ಪ್ರವಾದಿಗಳ ಹೆಸರು ಉಚ್ಚರಿಸಿ ವಿಶ್ವಾಸ ತೋರಬೇಕು ಮತ್ತು ಯಾರ ಹೆಸರು ತಿಳಿದು ಬರುವುದಿಲ್ಲ ಒಟ್ಟಾರೆಯಾಗಿ ಅವರ ಪ್ರವಾದಿತ್ವದ ಮೇಲೂ ವಿಶ್ವಾಸ ಹೊಂದಿರಬೇಕು ಅಂದರೆ ಎಲ್ಲಾ ಜನಾಂಗದಲ್ಲೂ ಪ್ರವಾದಿಗಳು ಆಗಮಿಸಿರುತ್ತಾರೆ ಅವರುಗಳನ್ನೆಲ್ಲ ಸತ್ಯ ಪ್ರವಾದಿಗಳೆಂದು ನಂಬಬೇಕು. ಅವರ ಶಿಕ್ಷಣಗಳನ್ನು ದೈವಿಕ ಶಿಕ್ಷಣಗಳೆಂದು ನಂಬಬೇಕು. ಆದುದರಿಂದ ಯಾವ ವ್ಯಕ್ತಿ ತನ್ನ ಕಾಲದ ಅಥವಾ ಪೂರ್ವ ಕಾಲದ ಪ್ರವಾದಿಗಳ ಪ್ರವಾದಿತ್ವ ಒಪ್ಪಿಕೊಳ್ಳಬೇಕು ಮತ್ತು ಪ್ರವಾದಿಯನ್ನು ಧಿಕ್ಕರಿಸದವನು ಮುಸ್ಲಿಮನಾಗಿದ್ದಾನೆ. ಏಕೆಂದರೆ ಎಲ್ಲಾ ಪ್ರವಾದಿಗಳ ಪ್ರವಾದಿತ್ವವನ್ನು ಸಾಕ್ಷ್ಯವಹಿಸಿದ ನಂತರ ಅಲ್ಲಾಹನು ಈ ಪದ ಬಳಸಿರುವನು– “ನಹನು ಲಹೂ ಮುಸ್ಲಿಮೂನ್” ನಾನು ಅವನಿಗೆ ವಿಧೇಯರಾಗಿದ್ದೇವೆ ಅದರಿಂದ ತಿಳಿದು ಬರುವುದೇನೆಂದರೆ ಈ ವಿಶ್ವಾಸದ ನಂತರ ಮನುಷ್ಯನು ಮುಸ್ಲಿಮನಾಗುವನು. ಇದು ಇಸ್ಲಾಮ್ ಧರ್ಮದ ಏಕಮಾತ್ರ ವಿಷೇಶತೆಯಾಗಿದೆ. ಅದು ಲೋಕದ ಎಲ್ಲಾ ಪ್ರವಾದಿಗಳ ಸತ್ಯತೆಯನ್ನು ಒಪ್ಪಿಕೊಳ್ಳಲು ಆಗ್ರಹಿಸುತ್ತದೆ. ಎಲ್ಲ ಧರ್ಮಗಳ ಅನುಯಾಯಿಗಳನ್ನು ತಮ್ಮ ತಮ್ಮ ಧರ್ಮಗಳ ಪ್ರವಾದಿಗಳ ಸತ್ಯತೆಯನ್ನು ಮಾತ್ರ ಒಪ್ಪಿ ಕೊಳ್ಳುವಂತೆ ಆಗ್ರಹಿಸುತ್ತವೆ ಹೊರತು ಇತರ ಜನಾಂಗಗಳ, ಸಮುದಾಯಗಳ ಪ್ರವಾದಿಗಳನ್ನು ಒಪ್ಪಿಕೊಳ್ಳಲು ಆಗ್ರಹಿಸುವುದಿಲ್ಲ. ಆದರೆ ಇಸ್ಲಾಮ್ ಧರ್ಮ ಎಲ್ಲಾ ಪ್ರವಾದಿಗಳ ಸತ್ಯತೆಯನ್ನು ಮನ್ನಿಸುತ್ತದೆ. ಅದು ಬನೀ ಇಸ್ರಾಯೀಲ್ ಸಮುದಾಯದವರೇ ಆಗಿರಲಿ, ಅಥವಾ ಹಿಂದೂ ಈರಾನ್ ಜನರಲ್ಲಿ ಆಗಮಿಸಿದವರಾಗಲಿ ಅಥವಾ ಲೋಕದ ಯಾವ ದೇಶದಲ್ಲಿ ಸುಧಾರಕರಾಗಿ ಬಂದವರಾಗಲಿ ಸಾರಾಸಗಟಾಗಿಲ್ಲದಿದ್ದರೂ ಒಟ್ಟಾರೆ ರೂಪದಲ್ಲಿ ವಿಶ್ವಾಸ ಹೊಂದಲು ಹೇಳುತ್ತದೆ. ಸವಿವರಣೆಯೊಂದಿಗೆ ವಿಶ್ವಾಸವಿರುವ ವಿಷಯವಾಗಿರುತ್ತಿದ್ದರೆ “ವಮಾ ಊತಿಯನ್ನಬೀಯೂನ ಮಿರ್‌ರಬ್ಬಿಹಿಮ್ ಎಂದು ಹೇಳಿ ನಾವು ತಿಳಿದಿರುವಂತಹ ಪ್ರವಾದಿಗಳ ವಿಶ್ವಾಸ ತರಲು ಹೇಳುತ್ತಿರಲಿಲ್ಲ. ಪವಿತ್ರ ಖುರ್‌ಆನಿನಲ್ಲಿ ಅವರ ವಿವರಗಳೇ ಲಭ್ಯವಿಲ್ಲದಿದ್ದರು ಸಹ ಒಟ್ಟಾರೆ ರೂಪದಲ್ಲಿ ಅವರ ಮೇಲೆ ವಿಶ್ವಾಸ ಹೊಂದುವುದು ಅವಶ್ಯವಾಗಿದೆ ಎಂದು ಹೇಳಲಾಗಿದೆ.

ನಾನು ಈ ಸಂದರ್ಭದಲ್ಲಿ ಮುಸ್ಲಿಮರಿಗೂ ಗಮನ ವಹಿಸಲು ಹೇಳುತ್ತೇನೆ:– ಎಲ್ಲ ಪ್ರವಾದಿಗಳ ಮೇಲೆ ವಿಶ್ವಾಸ ಉಳ್ಳವನೇ ಮುಸ್ಲಿಮನಾಗಿರುವನು. ಹಝ್ರತ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲಯಹಿವಸಲ್ಲಮರು ಬರುವ ಮಸೀಹರನ್ನು “ನಬೀಯುಲ್ಲಾಹ್” (ಅಲ್ಲಾಹನ ಪ್ರವಾದಿ) ಎಂದು ಕರೆದಿದ್ದಾರೆ. ಈ ಕಾಲದಲ್ಲಿ ಮಸೀಹರ ವಾಗ್ದಾನ ಅಹ್ಮದಿಯಾ ಸಂಘಟನೆಯ ಸ್ಥಾಪಕರ ಆಗಮನದಿಂದ ಪೂರ್ಣಗೊಂಡಿದೆ. ಆದುದರಿಂದ ತನ್ನನ್ನು ಇಸ್ಲಾಮ್ ಧರ್ಮದಿಂದ ಸಂಬಂಧಪಟ್ಟವನು ಎಂದು ಭಾವಿಸುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯವಾಗಿರುತ್ತದೆ. ಅವನು ಎಚ್ಚರಗೊಳ್ಳಬೇಕು ಮತ್ತು ಅಲಕ್ಷ್ಯತನದಿಂದ ವಾದವನ್ನು ನೋಡಬಾರದು. ಏಕೆಂದರೆ ಅಲಕ್ಷ್ಯ ವಹಿಸಿದರೆ ಇಸ್ಲಾಮ್ ಧರ್ಮದಂತಹ ಅಮೂಲ್ಯ ವಸ್ತು ಕೈಜಾರುವ ಸಂಭವವಿರುತ್ತದೆ. ಅಂತೂ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ಪ್ರವಾದಿತ್ವ ಒಳಗೊಂಡು ಅಲ್ಲಾಹನ ಎಲ್ಲ ಪ್ರವಾದಿಗಳ ಮೇಲೆ ವಿಶ್ವಾಸ ಹೊಂದಿದವನೆ ಮುಸ್ಲಿಮನಾಗಿರುವನು. ಆದುದರಿಂದ ಮುಸ್ಲಿಮರು ಎಚ್ಚರವಹಿಸುವ ಅಗತ್ಯವಿದೆ. (ತಫ್‌ಸೀರೆ ಕಬೀರ್ ಸಂಪುಟ–2, ಪುಟ–210 ರಿಂದ 211 ಮುದ್ರಣ ಖಾದಿಯಾನ್ 2010)

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.1, Thursday, 08 October 2020, Issue No. 39

MANAGER
NAWAB AHMAD.
Mobile : +91 94170-20616
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 38ರ ವರದಿಯ ಉಳಿದ ಭಾಗ)**

ಓರ್ವ ಜರ್ಮನ್ ಮಹಿಳಾ ಅತಿಥಿ KATHEJA ಸಾಹಿಬಾ ತನ್ನ ಅನಿಸಿಕೆಗಳನ್ನು ಹೀಗೆ ಹೊರಹಾಕಿದಳು. "ನಮಗೆ ಓರ್ವ ಆಧ್ಯಾತ್ಮಿಕ ಪಿತನಿದ್ದಾರೆ, ಅವರು ನಮ್ಮೊಡನೆ ಮಾತನಾಡುತ್ತಿದ್ದಾರೆ ಎಂದು ಭಾಸವಾಗುತ್ತಿತ್ತು.. ನಾವೆಲ್ಲ ಅವರ ಮಕ್ಕಳಾಗಿದ್ದೇವೆ. ಅವರ ಮುಂದೆ ಎಲ್ಲರೂ ಸಮಾನರು. ಯಾರು ಕಿರಿಯರು ಇಲ್ಲ ಹಿರಿಯರೂ ಇಲ್ಲ.

ನಿಸ್ಸಂಶಯವಾಗಿ ನಾನು ಕ್ರೈಸ್ತ ಮತ್ತು ಕ್ರೈಸ್ತ ಧರ್ಮದಂತೆ ನಡೆದುಕೊಳ್ಳುತ್ತೇನೆ. ಆದರೆ ಇಂದು ಖಲೀಫರ ಸಂಬೋಧನೆ ನಮ್ಮ ಮನಮುಟ್ಟುವಂತಾಗಿದೆ. ನಾವು ಅವರ ಮಾತುಗಳಿಂದ ಬಹಳಷ್ಟು ಕಲಿತಿದ್ದೇವೆ. ಅವರು ಹೇಳಿದ ಮಾತುಗಳು ಅದ್ಭುತವಾಗಿದ್ದವು. ನನಗೆ ಒಂದು ಮಾತು ಬಹು ಪ್ರಿಯವಾಗಿ ಕಂಡಿದೆ. ನೀವು ಆರಾಧನೆಗೋಸ್ಕರ ಹೋಗುತ್ತಿದ್ದರೂ ಯಾರಾದರೂ ಸಹಾಯಕ್ಕೆ ಕರೆದರೆ ಅವರಿಗೆ ಸಹಕಾರ ನೀಡಿರಿ.

ERIC PIPA ಸಾಹಿಬ್ D.C. ಹೇಳಿದರು. ಖಲೀಫರ ಭಾಷಣವು ನಮ್ಮ ಮೇಲೆ ತುಂಬ ಒಳ್ಳೆಯ ಪ್ರಭಾವ ಬೀರಿದೆ. ಅವರು ಅಮುಸ್ಲಿಮ್ ನಾಗರಿಕರೊಡನೆ ನೇರವಾಗಿ ಸಂಬೋಧಿಸಿದರು. ಹೀಗೆ ಅವರು ಎಲ್ಲಾ ಮಾನವ ಕುಲಕ್ಕೆ ಒಬ್ಬನೇ ದೇವರಿದ್ದಾನೆ ಎಂಬುದರ ಕಡೆ ಗಮನ ಸೆಳೆದರು. ಮತ್ತು ಪರಸ್ಪರ ಗೌರವಿಸುವ ಪಾಠ ನೀಡಿದರು. ಸಮಸ್ಯೆಗಳನ್ನು ಶಾಂತಿಯಿಂದ ಪರಿಹರಿಸುವ ಮಾರ್ಗ ಸೂಚಿಸಿದರು. ಈಗ ನಿಮ್ಮ ಜಮಾಅತಿನ ಕರ್ತವ್ಯವಾಗಿರುತ್ತದೆ. ಇಂದು ಖಲೀಫರು ನೀಡಿದಂತಹ ಸಂದೇಶ ಜನಸಮಾನ್ಯದವರಿಗೆ ತಲುಪಿಸುವ ಪ್ರಯತ್ನ ಮಾಡಬೇಕು. ಅದರಿಂದ ನಾವು ಈ ಕ್ಷೇತ್ರದಲ್ಲಿ ಜರ್ಮನಿಯಲ್ಲಿ, ಯೂರೋಪಿನಲ್ಲಿ ಮತ್ತು ಇಡೀ ಲೋಕದಲ್ಲಿ ಶಾಂತಿ ಪ್ರೀತಿಯಿಂದ ಒಗ್ಗಟ್ಟಿನಿಂದ ಇರಬಹುದಾಗಿದೆ.

ನನಗೆ ತಮ್ಮ ಭಾಷಣ ತುಂಬ ಮೆಚ್ಚುಗೆಯಾಗಿದೆ. ನನಗೆ ಅದರ ಬರಹದ ಕಾಪಿ ನೀಡಬೇಕು. ಮತ್ತು ಅದನ್ನು ಎಲ್ಲರಿಗೋಸ್ಕರ Internet ನಲ್ಲಿ ಹಾಕಬೇಕು.

HANAU ನಗರದ CDU ಪಕ್ಷದ ಚೇರ್‌ಮನ್ ಹೇಳಿದರು. ಕೆಲ ಜನರಿಂದ ಇಸ್ಲಾಮ್ ಧರ್ಮವನ್ನು ನಂದಿಸಲಾಗುತ್ತದೆ. ಇಂದು ನಾವು ಖಲೀಫತುಲ್ ಮಸೀಹ್‌ರ ಸಂಬೋಧನೆ ಕೇಳಿದೆವು. ಈಗ ನಾನು ಬಯಸುವುದು ಈ ಕ್ಷೇತ್ರದ ಇಮಾಮರು ಬಂದು ನಮ್ಮ ಪಕ್ಷವನ್ನು ಸಂಬೋಧಿಸಿ ಮಾತನಾಡಬೇಕು. ಇಂದು ಖಲೀಫರು ನೀಡಿದ ರೀತಿಯಲ್ಲಿಯೆ ಆ ಸಂದೇಶ ನೀಡಿದರೆ ಬಹು ಸರಳವಾಗಿ ನಮ್ಮ ಪಕ್ಷಕ್ಕೆ 16 ಅಥವಾ 18 ರಾಯಭಾರಿಗಳು ದೊರೆಯಬಹುದಾಗಿದೆ. ಅವರು ಈ ಸಂದೇಶವನ್ನು ಮುಂದುವರೆಸುವರು.

ಅತಿಥಿಯೋರ್ವರು ಹೇಳಿದರು. ಖಲೀಫರ ಸಂಬೋಧನೆ ನಿಶ್ಚಿತತೆಯಿಂದ ಕೂಡಿತ್ತು. ಅವರ ಪದಗಳ ಆಯ್ಕೆ ತುಂಬ ಚೆನ್ನಾಗಿದ್ದವು. ಉದಾಹರಣೆಗೆ ಶಾಂತಿ ಮತ್ತು ಸೌಹಾರ್ದತೆ, ಈ ಮೌಲ್ಯಗಳು ನಮ್ಮಲ್ಲಿಯೂ ಇವೆ. ಆದರೆ ಅದರ ವಿವರಣೆ ತುಂಬ ಕರುಣೆಯಿಂದ ಕೂಡಿದ್ದಾಗಿದ್ದವು. ನಾನು ತುಂಬ ಪ್ರಭಾವಿತನಾಗಿದ್ದೇನೆ. BERND REUTER ಮಾಜಿ ಸಂಸದರು ಹೇಳಿದರು. ನನಗೆ ಭರವಸೆಯಿದೆ. ಈ ಮಸೀದಿಯು ಸಮಾಜದಲ್ಲಿ ಸುಧಾರಣೆ ತರಬಲ್ಲುದು ಮತ್ತು ತರಬಹುದಾಗಿದೆ. ಆ ಮೂಲಕ ಜನರಲ್ಲಿ ಸಂಪರ್ಕ ಬೆಳೆಸಬಹುದು. ಒಬ್ಬರು ಮತ್ತೊಬ್ಬರ ಭಾವನೆಗಳನ್ನು ಅರಿಯಬಹುದು. ಅತಿಥಿಯೋರ್ವರು ಹೇಳಿದರು. ನನಗೆ ಮೊದಲು ಇಸ್ಲಾಮಿನ ಕುರಿತು ಒಳ್ಳೆಯ ಅಬಿಪ್ರಾಯ ಬರಲು ಕಷ್ಟ ಸಾಧ್ಯವಾಗಿತ್ತು. ಆದರೆ ಇಂದು ಖಲೀಫತುಲ್ ಮಸೀಹ್ ಪ್ರಸ್ತುತಪಡಿಸಿದ ಇಸ್ಲಾಮ್ ನೋಡಿ ಅರಿಯುವಂತಾಯಿತು. ಇಸ್ಲಾಮ್ ಶಾಂತಿ ಮತ್ತು ಕರುಣೆಯ ಶಿಕ್ಷಣ ನೀಡುವ ಧರ್ಮವಾಗಿದೆ. ಈ ಭಾವನೆ ಇಸ್ಲಾಮಿನ, ಖುರ್‌ಆನ್‌ನ ಗುಣವಾಗಿದೆ.

### ಅತಿಥಿಯೋರ್ವರು ಹೇಳಿದರು

ಖಲೀಫರು ಇಸ್ಲಾಮಿನ ಮೂಲಭೂತ ಶಿಕ್ಷಣವನ್ನು ಪ್ರಸ್ತುತಪಡಿಸಿದ್ದಾರೆ ಮತ್ತು ಅತ್ಯಮತ ಉತ್ತಮ ರೀತಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಅದನ್ನು ಹಿಂಜರಿಯದೆ ಸಾಕ್ಷ್ಯವಹಿಸುವ ಅಗತ್ಯವಿದೆ. ನಾನು ಸ್ವಯಂ ಅಂತೂ ಇಸ್ಲಾಮಿನ ಕುರಿತು ಅಧ್ಯಯನ ಮಾಡಲಿಲ್ಲ. ಆದರೆ ಇಂದು ಖಲೀಫತುಲ್ ಮಸೀಹ್ ಹೇಳಿದ ಮಾತುಗಳು ನನಗೆ ತುಂಬ ಸಕರಾತ್ಮಕ ಎನಿಸಿವೆ. ನನಗೆ ಇಲ್ಲಿಯವರೆಗೂ ತಿಳಿದಿರಲಿಲ್ಲ. ಇಸ್ಲಾಮ್ ಸೌಹಾರ್ದತೆ, ಪರಸ್ಪರ ಅನುಕಂಪ ಸ್ಥಾಪಿಸಲು ಮತ್ತು ಪರಸ್ಪರ ಗೌರವಿಸುವ ಶಿಕ್ಷಣ ನೀಡುತ್ತದೆ ಎಂದು. ಆದರೆ ಇಂದು ಆ ಮಾತುಗಳನ್ನು ಕೇಳಿ ತುಂಬ ಪ್ರಭಾವಿತನಾದೆ.

ನನಗೆ CHRISTNIE BUCHHOLZ ಸಾಹಿಬ ಸಂಸದೆ ಹೇಳಿದರು. ಇಲ್ಲಿ HANAU ನಲ್ಲಿ ಅಹ್ಮದಿಯಾ ಜಮಾಅತ್ ತುಂಬ ಪ್ರಭಾವಿತಗೊಂಡಂತೆ ಕಾಣುತ್ತಿದೆ ವಿಶೇಷವಾಗಿ ಇಂದಿನ ಕಾಲದಲ್ಲಿ ಮಸೀದಿಗಳ ನಿರ್ಮಾಣ ತುಂಬ ಕಷ್ಟದ ಕೆಲಸವಾಗಿದೆ. ಇಸ್ಲಾಮಿನ ಬಗ್ಗೆ ದ್ವೇಷವಿದೆ. ಆದುದರಿಂದ ಇಂದಿನ ಉದ್ಘಾಟನೆಯು ತುಂಬ ಸಕರಾತ್ಮಕವಾಗಿದೆ. ಆದ್ದರಿಂದ ಜನರು ಇಸ್ಲಾಮಿನ ಕುರಿತು ಅರಿಯಬಹುದಾಗಿದೆ. ಮಸೀದಿ ನಿರ್ಮಾಣದ ಒಂದು ಉದ್ದೇಶ ಜನರು ಪರಸ್ಪರ ಬೆರೆಯುವುದಾಗಿದೆ. ನನಗೆ ಇಂದು ಖಲೀಫರೊಡನೆ ತುಂಬ ಸಮೀಪದಿಂದ ಮಾತನಾಡುವ ಸಂದರ್ಭ ಒದಗಿ ಬಂದಿದೆ. ಉಪಹಾರದ ಮಧ್ಯೆ ಲಘು ಮಾತುಗಳು ನಡೆದವು. ನನಗೆ ತುಂಬ ಹಿತವೆನಿಸಿತು. ಖಲೀಫರು ತುಂಬ Open ಮತ್ತು Amusing ಆಗಿದ್ದಾರೆ. ಅವರೊಡನೆ ಭೇಟಿ ನನಗೆ ತುಂಬ ಗೌರವದ ವಿಷಯವಾಗಿದೆ.

ಅತಿಥಿಯೋರ್ವರು ಹೇಳಿದರು. ನನಗೆ ಖಲೀಫರು ಗಾಂಭೀರ್ಯಯುಳ್ಳ ವ್ಯಕ್ತಿಗಳು ಎನಿಸುತ್ತವೆ. ಅವರು ಅತ್ಯಂತ ಉತ್ತಮ ರೀತಿಯಲ್ಲಿ ಸಂಬೋಧಿಸಿದರು. ಅವರ ಸಂಬೋಧನೆ ನಮ್ಮ ಮೇಲೆ ತುಂಬ ಪ್ರಭಾವ ಬೀರಿದೆ.

ಮಸೀದಿಯ ನೆರೆಯವರಾದ ಓರ್ವ ಜರ್ಮನ್ ಅತಿಥಿ Rufix ಹೇಳಿದರು ಇಂದಿನ ಕಾರ್ಯಕ್ರಮ ತುಂಬ ಒಳ್ಳೆಯದೆನಿಸಿತು. ನನಗೆ ಈ ಹಿಂದೆ ಜಮಾಅತ್ ಅಹ್ಮದಿಯಾ ಕುರಿತು ಏನೂ ತಿಳಿದಿರಲಿಲ್ಲ. ಆಹ್ವಾನ ಪಡೆದ ನಂತರ Internet ಮೇಲೆ ಜಮಾಅತಿನ ಕುರಿತು ಕೆಲವು ಮಾಹಿತಿಗಳನ್ನು ಪಡೆದೆ. ಖಲೀಫರ ಸಂಬೋಧನೆಯ ನಂತರ ನನಗೆ ಇದೆಲ್ಲ ಸತ್ಯವೆಂದು ತಿಳಿಯುತ್ತದೆ. ಇಸ್ಲಾಮಿನ ಕುರಿತು ಇಲ್ಲಿಯವರೆಗೆ ಇದ್ದ ತಪ್ಪು ಕಲ್ಪನೆ ದೂರವಾಗಿದೆ. ಮತ್ತು ವಾಸ್ತವವು ತಿಳಿದಿದೆ. ಈಗ ಎಲ್ಲ ಸರಿಯಾಗಿದೆ.

ಖಲೀಫತುಲ್ ಮಸೀಹ್ ಹೇಳಿದರು. ಎಲ್ಲರೂ ಒಟ್ಟುಗೂಡಿ ಇರುವಾಗ ಮಾತ್ರ ಶಾಂತಿ ಸ್ಥಾಪಿಸಲು ಸಾಧ್ಯವಾಗುತ್ತದೆ ಎಂಬ ಮಾತು ಸರಿಯಾಗಿದೆ. ನಿಮ್ಮ ಖಲೀಫರ ಮಾತುಗಳು ಸತ್ಯದಿಂದ ಕೂಡಿದ್ದಾಗಿದೆ.

ಇನ್ನೋರ್ವ ಅತಿಥಿ Murdoc ಸಾಹಿಬ್ ಹೇಳಿದರು. ಖಲೀಫತುಲ್ ಮಸೀಹರ ಆಗಮನ ಮತ್ತು ಅವರ ಸಂಬೋಧನೆ ನನಗೆ ಅತ್ಯಂತ ಹಿತವೆನಿಸಿತು. ಖಲೀಫರು ಹೇಳಿದ್ದಂತಹ ಈ ಮಾತು ನನಗೆ ತುಂಬ ಮೆಚ್ಚುಗೆಯಾಯಿತು. ತಮ್ಮ ನೆರೆಹೊರೆಯವರೊಡನೆ ಮನಮುಟ್ಟುವಂತಹ ಸಂಬಂಧವನ್ನು ಇರಿಸಿಕೊಳ್ಳಿರಿ. ಇದೊಂದು ಅತ್ಯಂತ ಪ್ರಮುಖ ಹೆಜ್ಜೆ ಆಗಿದೆ. ಮತ್ತು ಖಲೀಫರ ಈ ಮಾತು "ಪ್ರತಿಯೊಬ್ಬ ಮನುಷ್ಯನು ಅವನ ಸಂಬಂಧ ಯಾವ ಧರ್ಮದಿಂದಾದರೂ ಆಗಲಿ, ಈ ಮಸೀದಿಗೆ ಬರಬಹುದಾಗಿದೆ. ಮತ್ತು ಯಾರಾದರೂ ಸಹ ನಮ್ಮಿಂದ ಸಹಾಯ ಪಡೆಯಬಹುದು. ಮತ್ತೆ ನನಗೆ ಖಲೀಫ ಸಾಹೇಬರ ಈ ನುಡಿ ಮನಮುಟ್ಟಿತು. ಮಸೀದಿಯಲ್ಲಿ ಕೇವಲ ಅಲ್ಲಾಹನ ಆರಾಧನೆಗೋಸ್ಕರ ಒಟ್ಟು ಸೇರುವುದಿಲ್ಲ. ಬದಲು ಮಾನವರ ಸಹಾಯದ ಕುರಿತು ಇಲ್ಲಿ ಜನರು ಬರಬಹುದಾಗಿದೆ.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:
**NATIONAL TOLL FREE**
**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.